ವಿಜಯಪುರ | ಸಂಪುಟ 02 | ಸಂಚಿಕೆ 241 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ


ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ನವೆಂಬರ್ 19, 2024

"ರಾಜ್ಯದಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 100 ಸಂಖ್ಯಾಬಲದ ಒಟ್ಟು 62 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ದೊರಕಿದೆ. ಇದರಲ್ಲಿ ಬಸವನಬಾಗೇವಾಡಿಗೂ ಒಂದು ಮಂಜೂರಾತಿ ದೊರೆತಿದೆ."



■ ಶಿವಾನಂದ ಪಾಟೀಲ
ಸಕ್ಕರೆ, ಕೃಷಿ ಮಾರುಕಟ್ಟೆ ಹಾಗೂ ಜವಳಿ ಸಚಿವರು

# ಮನುಕುಲಕ್ಕೆ ಆದರ್ಶ ವಿಚಾರಗಳು ನೀಡಿದ ಕನಕದಾಸರು

## ಭಕ್ತ ಕನಕದಾಸ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಕರೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮನುಷ್ಯರನ್ನು ಗೌರವಿಸುವಂತಹ ಬಹುದೊಡ್ಡ ಪ್ರೇರಕ ಶಕ್ತಿ ಕನಕದಾಸರು. ಇಡೀ ಜೀವನ ಮನುಕುಲಕ್ಕೆ ಆದರ್ಶಮಯ ವಿಚಾರಗಳನ್ನು, ಸಮಾಜಮುಖಿ ಚಿಂತನೆಗಳನ್ನು ತತ್ವಾದರ್ಶಗಳನ್ನ ನೀಡಿದ ಸಂತ ಶ್ರೇಷ್ಠ ಕನಕದಾಸರ ಆದರ್ಶ-ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಸೋಮವಾರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂತ, ಸತ್ಪುರುಷರು ಈ ಮನುಕುಲದ ಉದ್ಧಾರಕರು ಹಾಗೂ ಸುಧಾರಕರು ಕತ್ತಲೆಯನ್ನು ಕಳೆದು ಅಂತರಂಗದ ತಿಳುವಿನ ಒಳಗಣ್ಣನ್ನು ತೆರೆಸಿದ ಶ್ರೇಷ್ಠ ಸತ್ಪುರುಷರು. ವಿವಿಧ ಸಂತರಿಗೆ ಗೌರವ ಸಲ್ಲಿಸುವ ಉದ್ದೇಶದೊಂದಿಗೆ ವಿವಿಧ ಸಂತರ ಜಯಂತಿ ಕಾರ್ಯಕ್ರಮಗಳನ್ನು ಆಚರಿಸಲಾಗುತ್ತದೆ. ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದಿ ಸಮಾಜಮುಖಿ ಚಿಂತನೆಗಳನ್ನು ನೀಡಿದ ಕನಕದಾಸ, ಬುದ್ಧ, ಬಸವ ಅಂಬೇಡ್ಕರ್ ಅವರ ಆದರ್ಶಮಯ ವಿಚಾರಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾಪಂಚಾಯತಿಯಮುಖ್ಯಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಅವರು ಮಾತನಾಡಿ, ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೆಯಾದ ಕೊಡುಗೆಯನ್ನು ನೀಡಿದ್ದಾರೆ. ಕನಕದಾಸರು ಸುಮಾರು 300ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಹರಿಭಕ್ತಿಸಾರ, ಮೋಹನ ತರಂಗಿಣಿ, ರಾಮಧಾನ್ಯಚರಿತೆ, ನಳಚರಿತೆ ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ ಎಂದು ಹೇಳಿದರು.


ಪ್ರೊ.ಎ.ಎಚ್ ಕೊಳಮಲಿ ಉಪನ್ಯಾಸ ನೀಡಿದರು.

ಮುಖಂಡ ಮಲ್ಲಣ್ಣ ಶಿರಸ್ಯಾಡ ಕನಕದಾಸರ ಕುರಿತು ಮಾತನಾಡಿದರು.

ಸಿದ್ದರಾಮ ಬಿರಾದಾರ, ರಾಮಸ್ವಾಮಿ ಕೊಳಮಲಿ, ಎಸ್.ಸಿ.ಕುರ್ಲೆ ಅವರು ಕಾವ್ಯ ವಾಚನ ಮಾಡಿದರು. ಮಹೇಶ ಪೂಜಾರಿ ಹಾಗೂ ತಂಡ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕರಾದ ಸಂತೋಷ ಭೋವಿ ಸ್ವಾಗತಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ಅಶೋಕ ನ್ಯಾಮಗೊಂಡ, ರಾಹುಲ್ ಜಾಧವ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ, ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಹೆಸ್ಕಾಂ ಅಧಿಕ್ಷಕ ಅಭಿಯಂತರರಾದ ಸಿದ್ದಪ್ಪ ಬಿಂಜಗೇರಿ, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಅಶೋಕ ಘೋಣಸಗಿ, ರವಿ ಕಿತ್ತೂರ, ಸುಜಾತ ಕಳ್ಳಿಮನಿ, ವಿದ್ಯಾವತಿ ಅಂಕಲಗಿ, ಅಡಿವೆಪ್ಪ ಸಾಲಗಲ್, ಭಿಮರಾಯ ಜಿಗಜಿಣಗಿ, ದೇವೇಂದ್ರ ಮಿರೇಕರ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಸಮುದಾಯದ ಮುಖಂಡರು, ಸಾರ್ವಜನಿಕರು ಶಾಲಾ ಮಕ್ಕಳು ಭಾಗವಹಿಸಿದ್ದರು.





"ಕನಕದಾಸರು ಸಮಾಜದ ಒಳಿತಿಗಾಗಿ ನೀಡಿರುವ ಸಂದೇಶ ಪಾಲಿಸೋಣ, ಇವರು ಓರ್ವ ಹರಿದಾಸ ಸಂತರು, ತತ್ವಜ್ಞಾನಿ, ವ್ಯಾಸ ತೀರ್ಥರ ಶಿಷ್ಯರಾಗಿದ್ದರು. 16ನೇ ಶತಮಾನದಲ್ಲಿ ಭಕ್ತಿ ಪಂಥದಲ್ಲಿನ ದಾಸವರೇಣ್ಯರು ಸಮಾಜದ ಸಮಾನತೆಗಾಗಿ ತಮ್ಮ ಕೀರ್ತನೆಗಳ ಮೂಲಕ ಮೂಲಕ ಜನಸಾಮಾನ್ಯ ರಾಡುವ ಭಾಷೆಯಲ್ಲಿಯೇ ತಿಳಿಹೇಳಿ ಸಮಾಜದ ಸುಧಾರಕರಾಗಿದ್ದಾರೆ. ಈ ಸಮಾಜದಲ್ಲಿ ಯಾವುದೇ ತಾರತಮ್ಯ ಇರಬಾರದು, ಭೇದಭಾವ ಇರಬಾರದು. ಎಲ್ಲರೂ ಸಮಾನರು ಎಂಬ ಸಂದೇಶ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ನೀಡಿದ್ದಾರೆ. ಅವರ ಆದರ್ಶ ವಿಚಾರಗಳನ್ನು ತತ್ವಗಳನ್ನ ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳೋಣ."



■ ರಿಷಿ ಆನಂದ
ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ವಿಜಯಪುರ



"ಕನಕದಾಸರ ತತ್ವ ಚಿಂತನೆಗಳನ್ನ ಅವರ ಆದರ್ಶಮಯ ವಿಚಾರಗಳನ್ನ ಮಕ್ಕಳ ಮನೋಭೂಮಿಕೆಯಲ್ಲಿ ಮೂಡಿಸಲು ಪ್ರಾಥಮಿಕ ಪ್ರೌಢ ಮತ್ತು ಪದವಿ ಪೂರ್ವ ಹಂತದಲ್ಲಿ ಕನಕದಾಸರ ವಿಚಾರಧಾರೆಗಳನ್ನು ತಲುಪಿಸುವ ಅವರ ಬಗೆಗೆ ಅನೇಕ ಸ್ಪರ್ಧೆಗಳನ್ನು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸುವ ಮೂಲಕ ಬಾಲ ವಿಕಾಸ ಅಕಾಡೆಮಿ ಮುಂಬರುವ ದಿನಗಳಲ್ಲಿ ಯೋಜನೆ ಸಿದ್ಧಪಡಿಸಿಕೊಂಡು ಕಾರ್ಯನಿರ್ವಹಿಸಲಾಗುವುದು."

■ ಸಂಗಮೇಶ ಬಬಲೇಶ್ವರ
ಅಧ್ಯಕ್ಷರು, ಕರ್ನಾಟಕ ಬಾಲವಿಕಾಸ ಅಕಾಡೆಮಿ

### ಮೆರವಣಿಗೆಗೆ ಚಾಲನೆ

ಕಾರ್ಯಕ್ರಮಕ್ಕೂ ಮೊದಲು ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಆರಂಭಗೊಂಡ ಸಂತ ಶ್ರೇಷ್ಠ ಕನಕದಾಸರ ಭಾವಚಿತ್ರದ ಮೆರವಣಿಗೆಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಅವರು ಚಾಲನೆ ನೀಡಿದರು. ಭವ್ಯ ಮೆರವಣಿಗೆಯು ನಗರದಲ್ಲಿ ಸಂಚರಿಸಿ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಸಮಾವೇಶಗೊಂಡಿತು.

# ಕನಕದಾಸರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ :ಮನಗೂಳಿ



■ ಉದಯರಶ್ಮಿ ದಿನಪತ್ರಿಕೆ

### ಕನಕದಾಸರ ಕಂಚಿನ ಪ್ರತಿಮೆಗೆ ವೈಯಕ್ತಿಕ 5ಲಕ್ಷ ರೂ. ದೇಣಿಗೆ ವಾಗ್ದಾನ ನೀಡಿದ ಶಾಸಕ ಮನಗೂಳಿ

ಸಿಂದಗಿ: ಭಕ್ತಿ ಮಾರ್ಗದಿಂದ ಭಗವಂತನನ್ನು ಕಾಣಲು ಸಾಧ್ಯ ಎಂದು ತೋರಿಸಿಕೊಟ್ಟ ಭಕ್ತ ಕನಕದಾಸರನ್ನು ನೆನೆಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ಪಟ್ಟಣದಲ್ಲಿ ನಡೆದ ಕನಕದಾಸ ಜಯಂತಿಯಲ್ಲಿ ಶಾಸಕ ಆಶೋಕ ಮನಗೂಳಿ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಭಕ್ತಿ ಮಾರ್ಗದಿಂದ ದೇವರನ್ನು ಒಲಿಸಿಕೊಂಡ ಕನಕದಾಸರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ. ಅವರ ಆದರ್ಶ, ತತ್ವ ಸಿದ್ಧಾಂತ, ಸಂದೇಶಗಳನ್ನು ಬದುಕಿನುದ್ದಕ್ಕೂ ಅಳಚಡಿಸಿಕೊಳ್ಳಬೇಕು. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದ ದಾರ್ಶನಿಕ, ಮಹಾನ್ ಕವಿ ಮತ್ತು ಭಕ್ತಿಯ ಸಾಮ್ರಾಜ್ಯವನ್ನು ಕಟ್ಟಿದವರು ಕನಕದಾಸರು. ಸಂತರ, ಶರಣರ, ದಾರ್ಶನಿಕರ ತತ್ವ ಸಿದ್ಧಾಂತಗಳನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಕಾರ್ಯ ನಡೆಯಬೇಕು. ನಾಡಿನ ಹರಿದಾಸ ಪರಂಪರೆ ಬೆಳಗಿಸಲು ಕನಕದಾಸರು ಜಾತಿ-ಮತ, ಮೇಲು-ಕೀಳು ಭಾವನೆ ಬದಿಗೆ ಸರಿಸಿ ಭಕ್ತಿ ಪರಂಪರೆಯ ಮೂಲಕ ದಾಸ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ನೂತನವಾಗಿ ಕಂಚಿನ ಮೂರ್ತಿ ಪ್ರತಿಷ್ಠಾಪಿಸಲು ನನ್ನ ವಯಕ್ತಿಕವಾಗಿ 5ಲಕ್ಷ ರೂ. ನೀಡುತ್ತೇನೆ ಎಂದರು.

ಈ ವೇಳೆ ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ, ಪುರಸಭೆ ಅಧ್ಯಕ್ಷ ಶಾಂತವೀರ ಬಿರಾದಾರ, ಉಪಾಧ್ಯಕ್ಷ ರಾಜಣ್ಣ ನಾರಾಯಣಕರ, ಸದಸ್ಯ ಹಾಸಿಂ ಆಳಂದ, ಸಂದೀಪ ಚೌರ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸುರೇಶ ಪೂಜಾರ, ಭೀಮು ವಾಲೀಕಾರ, ಶಾಂತೂ ರಾಣಾಗೋಳ, ಸಾಯಬಣ್ಣ ಪುರದಾಳ, ಸಿದ್ದು ಅಂಗಡಿ, ದಯಾನಂದ ಇವಣಿ ಸೇರಿದಂತೆ ಕನಕದಾಸರು ಅನುಯಾಯಿಗಳು, ಕುರುಬ ಸಮಾಜದ ಮುಖಂಡರು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು



## ಲಾಡ್ಲೇಸಾಬ ನಾಯ್ಕೋಡಿಗೆ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಬೆಂಗಳೂರಿನ ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆಯಿಂದ ಕೊಡಮಾಡುವ ಹೆಮ್ಮೆಯ ಕರ್ನಾಟಕ ರತ್ನ ಪ್ರಶಸ್ತಿಗೆ ಪಟ್ಟಣದ ಲಾಡ್ಲೇಸಾಬ ನಾಯ್ಕೋಡಿ ಭಾಜನರಾಗಿದ್ದು ನ17 ರಂದು ಬೆಂಗಳೂರಿನ ಮಹಾರಾಣಿ ಕಾಲೇಜು ಬಳಿ ಇರುವ ಭಾರತ ಸ್ಕೌಟ್ಸ್ ಆಂಡ್ ಗೈಡ್ಸ್ ಅಡಿಟೋರಿಯಂ ನಲ್ಲಿ ಪ್ರಶಸ್ತಿ ಸ್ವೀಕರಿಸಿದರು.

# ಡಿ.10 ರಂದು ವಿಧಾನಸೌಧ ಮುತ್ತಿಗೆ: ಜಯಮೃತ್ಯುಂಜಯ ಶ್ರೀ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಬೆಳಗಾವಿಯಲ್ಲಿ ಡಿ.10 ರಂದು ನಡೆಯುವ ವಿಧಾನಸಭೆ ಅಧಿವೇಶನದಲ್ಲಿ ಪಂಚಮಸಾಲಿ ಸಮಾಜಕ್ಕೆ 2 ಎ ಸೇರ್ಪಡೆ ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದೆಂದು ಪಂಚಮಸಾಲಿ ಸಮಾಜದ ಜಗದ್ಗುರು ಜಯಮೃತ್ಯುಂಜಯ ಶ್ರೀಗಳು ಹೇಳಿದರು.

ಪಟ್ಟಣದ ಅಕ್ಕಮಹಾದೇವಿ ಸಹಕಾರ ಸೌಹಾರ್ದದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಅತೀ ಹೆಚ್ಚು ದಿನಗಳ ಕಾಲ ಪಂಚಮಸಾಲಿ ಸಮಾಜ 2 ಎ ಸೇರ್ಪಡೆ ಆಗ್ರಹಿಸಿ ಹೋರಾಟ ನಡೆದಿದೆ.

ಪಂಚಮಸಾಲಿ ಸಮಾಜದ ಬೇಡಿಕೆ ದೇಶದ ಗಮನ ಸೆಳೆದಿದೆ. 2021 ರಿಂದ ಹೋರಾಟ ನಡೆದಿದೆ. ಆದರೂ ಈವರೆಗೆ ಬೇಡಿಕೆ ಈಡೇರಿಲ್ಲ. ಇಲ್ಲಿಯವರೆಗೂ ಸ್ಪಂದಿಸಿಲ್ಲ. ಕಳೆದ ಬಾರಿ ಬಿಜೆಪಿ ಸರಕಾರವಿದ್ದಾಗ ಪಂಚಮಸಾಲಿ ಸಮಾಜವನ್ನು 2 ಎ ಸೇರ್ಪಡೆ ಬದಲಾಗಿ 2ಡಿ ಮಾಡಿದರು. ಅದು ಬೇಕಾಗಿಲ್ಲ, ಹೀಗಾಗಿ 2 ಎ ಸೇರ್ಪಡೆಗೆ ಹೋರಾಟ ಮುಂದು ವರೆದಿದೆ.

ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಮಾತುಕತೆಗೆ ಕರೆದಿಲ್ಲ. ವಿಧಾನಸಭೆಯಲ್ಲಿ ಚರ್ಚೆ ನಡೆದಿಲ್ಲ, ಹೀಗಾಗಿ ರಾಜ್ಯದ ವಕೀಲರು ಬೆಳಗಾಂವಿಯಲ್ಲಿ ಬೃಹತ್ ಪ್ರತಿಭಟನೆ ಮಾಡಿ ಗಮನ ಸೆಳೆದಿದ್ದರು ಎಂದರು.

ರಾಜ್ಯ ಸರಕಾರ ಪಂಚಮಸಾಲಿ 2 ಎ ಕೇಂದ್ರಕ್ಕೆ ಶಿಫಾರಸು ಮಾಡಿ ಕಳುಹಿಸಬೇಕು. ವಿಳಂಬವಾಗುತ್ತಿದ್ದು ಸರಕಾರದ ಗಮನ ಸೆಳೆಯಲು ಡಿ. 10 ರಂದು ವಿಧಾನಸೌಧ ಮುತ್ತಿಗೆ ಹಾಕಲು ನಿರ್ಧರಿಸಿದೆ. ಅಂದು ಅಂದಾಜು ಐದು ಸಾವಿರ ಟ್ರ್ಯಾಕ್ಟರಗಳು ಮತ್ತು ಸಾವಿರಾರು ಕಾರ್ಯಕರ್ತರು ಸೇರಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮವಿದೆ. ವಕೀಲರ ಸಂಘದ ಮುಂದಾಳತ್ವದಲ್ಲಿ ನಡೆಯುವ ಈ ಪ್ರತಿಭಟನೆಗೆ ವಿಜಯಪುರ ಜಿಲ್ಲೆಯ ಪ್ರತಿ ಹಳ್ಳಿಯಿಂದ ಕನಿಷ್ಠ ಐದು ಟ್ರ್ಯಾಕ್ಟರ ತರಬೇಕು. ಇಲ್ಲವೆ ವಾಹನಗಳನ್ನು ತರಬೇಕು ಎಂದರು.

ಈಗಾಗಲೇ ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳ ವಕೀಲರ ಸಂಘ ತನ್ನ ಬೆಂಬಲ ಸೂಚಿಸಿದ್ದು ಈ ಕುರಿತು ಬೆಳಗಾಂವ, ವಿಜಯಪುರ, ಬಾಗಲಕೋಟ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪೂರ್ವ ಭಾವಿ ಸಭೆ ನಡೆಸಲಾಗುವದು ಎಂದರು.

ಈಗಾಗಲೇ ದಾವಣಗೆರೆಯ ರಾಜ್ಯ ಪಂಚಮಸಾಲಿ ಹೋರಾಟದ ಯುವ ಘಟಕದಉಪಾಧ್ಯಕ್ಷಅಜಯಕುಮಾರರವರು ಹೋರಾಟಕ್ಕೆ ದಾವಣಗೆರೆಯಿಂದ ಒಂದು ಸಾವಿರ ಟ್ರ್ಯಾಕ್ಟರ ಬರಲಿದ್ದು ಅದಕ್ಕೆ ಎಣ್ಣೆಯ ಖರ್ಚನ್ನು ತಾವೇ ನೀಡುವದಾಗಿ ತಿಳಿಸಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಇಂಡಿ ಪಂಚಮಸಾಲಿ ಸಮಾಜದ ಅಧ್ಯಕ್ಷ ವಿ. ಎಚ್.ಬಿರಾದಾರ, ನ್ಯಾಯವಾದಿ ಎಸ್. ಆರ್.ಬಿರಾದಾರ, ನ್ಯಾಯವಾದಿ ಡಿ.ಜಿ. ಜೋತಗೊಂಡ, ಮಂಜುನಾಥ ಕಾಮಗೊಂಡ, ಶರಣು ಬಂಡಿ, ಉಮೇಶ ಬಳಬಟ್ಟಿ,ಜೆ.ಬಿ.ಬೆನೂರ, ಶಿವಾನಂದ ಚಾಳಿಕಾರ , ವಿ.ಪಿ.ಪಾಟೀಲ,ಜಿ. ಎಸ್.ಪಾಟೀಲ ಮತ್ತಿತರಿದ್ದರು.



# ವಸತಿ ನಿಲಯ ಉದ್ಘಾಟಿಸಿದ ಸಚಿವ ಶಿವಾನಂದ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಪಟ್ಟಣದ ವೀರಭದ್ರೇಶ್ವರ ನಗರದ ಉದ್ಯಾನವನದ ಹತ್ತಿರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25 ನೇ ಸಾಲಿನಲ್ಲಿ ಮಂಜೂರಾದ ಡಿ.ದೇವರಾಜು ಅರಸು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯವನ್ನು ಸಕ್ಕರೆ, ಕೃಷಿ ಮಾರುಕಟ್ಟೆ ಹಾಗೂ ಜವಳಿ ಸಚಿವ ಶಿವಾನಂದ ಪಾಟೀಲ ಡಿ.ದೇವರಾಜ ಅರಸು ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಚಿವ ಶಿವಾನಂದ ಪಾಟೀಲ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 100 ಸಂಖ್ಯಾಬಲದ ಒಟ್ಟು 62 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ದೊರಕಿದೆ. ಇದರಲ್ಲಿ ಬಸವನಬಾಗೇವಾಡಿಗೂ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ಮಂಜೂರಾತಿ ದೊರೆತಿದೆ. ಈ ಭಾಗದಲ್ಲಿರುವ ವಿದ್ಯಾರ್ಥಿನಿಯರಿಗೆ ಈ ವಸತಿ ನಿಲಯ ತುಂಬಾ ಅನುಕೂಲವಾಗಲಿದೆ. ವಿದ್ಯಾರ್ಥಿನಿಯರು ಈ ವಸತಿ ನಿಲಯದ ಸದುಪಯೋಗ ಪಡೆದುಕೊಂಡು ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು. ಇಲಾಖೆಯ ಅಧಿಕಾರಿಗಳು ವಸತಿ ನಿಲಯದಲ್ಲಿರುವ ವಿದ್ಯಾರ್ಥಿನಿಯರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಈ ವಸತಿ ನಿಲಯವು ಬಾಡಿಗೆ ಕಟ್ಟಡದಲ್ಲಿ ಇದೀಗ ಆರಂಭವಾಗಿದೆ. ಈ ವಸತಿ ನಿಲಯಕ್ಕೆ ಹೋಗುವ ರಸ್ತೆಯನ್ನು ಪುರಸಭೆಯಿಂದ ಸುಧಾರಣೆ ಮಾಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ವಿದ್ಯಾರ್ಥಿನಿಯರಿಗೆ ಈ ವಸತಿ ನಿಲಯವು ವರದಾನವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಎಪಿಎಂಸಿ ಮಾಜಿ ಅಧ್ಯಕ್ಷ ಶೇಖರ ಗೊಳಸಂಗಿ, ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘದ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ, ಬಸವೇಶ್ವರ ದೇವಾಲಯದ ಇಂಟರ್ನ್ಯಾಷನಲ್ ಶಾಲೆಯ ಮೇಲುಉಸ್ತುವರಿ ಸಮಿತಿ ಸದಸ್ಯ ಎಂ.ಜಿ.ಆದಿಗೊಂಡ, ಪಂಚಾಕ್ಷರಿ ಕಾಳಹಸ್ತೇಶ್ವರಮಠ, ಹಿಂದುಳಿದ ವರ್ಗಗಳ ಇಲಾಖೆಯ ಕಲ್ಯಾಣಾಧಿಕಾರಿ ಎಸ್.ವ್ಹಿ.ನಿಂಬಾಳ, ಇಲಾಖೆಯ ವಿಸ್ತೀರ್ಣಾಧಿಕಾರಿ ಸಿ.ಜಿ.ಬಿರಾದಾರ, ಕಚೇರಿ ವ್ಯವಸ್ಥಾಪಕ ಎಸ್.ಡಿ.ಪೂಜಾರಿ, ವಿವಿಧ ವಸತಿನಿಲಯದ ಪಾಲಕರಾದ ಎಸ್.ಜಿ.ಕುಂಟೋಜಿ, ಪಿ.ಬಿ.ಬಡಿಗೇರ, ಬಿ.ಆರ್.ಹಳ್ಳಿ, ಸಿದ್ರಾಮ ಕುರಬರ, ಶ್ರೀದೇವಿ ಸಾವಳಗಿ, ಕವಿತಾ ತಾವರಖೇಡ, ಸುಜಾತಾ ಲಮಾಣಿ, ಕಚೇರಿ ಸಿಬ್ಬಂದಿ ಇತರರು ಇದ್ದರು.

ನಂತರ ಸಚಿವರು ಉದ್ಯಾನವನಕ್ಕೆ ತೆರಳಿ ಉದ್ಯಾನವನದಲ್ಲಿ ಪುರಸಭೆಯಿಂದ ಕೂಡಿಸಲಾದ ವಿವಿಧ ಮಕ್ಕಳ ಆಟಿಕೆ, ವ್ಯಾಯಾಮದ ಸಲಕರಣೆಗಳನ್ನು ವೀಕ್ಷಿಸಿ ಉದ್ಯಾನವನದಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆಗೆ ಹೈಮಾಸ್ಕ್, ಅಲ್ಲಲ್ಲಿ ವಿದ್ಯುದೀಪ ವ್ಯವಸ್ಥೆ, ಉದ್ಯಾನವನ ಆವರಣದಲ್ಲಿರುವ ಮೈದಾನವನ್ನು ಸಮತಳವಾಗಿಡುವದು, ಕಸ ತೆಗೆಸುವ ಕುರಿತು ಪುರಸಭೆ ಮುಖ್ಯಾಧಿಕಾರಿಗಳಿಗೆ ಹೇಳಬೇಕೆಂದು ಸ್ಥಳದಲ್ಲಿದ್ದ ಮುಖಂಡರಿಗೆ ಹೇಳಿದರು.



## ನಾಮಫಲಕಗಳಲ್ಲಿ ಶೇ.60 ಕನ್ನಡ ಭಾಷೆ ಬಳಸಲು ಕ್ರಮ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಪಟ್ಟಣದ ಪುರಸಭೆ ವ್ಯಾಪ್ತಿಯ ಹೋಟೆಲ್, ಕಾಲೇಜು ಹಾಗೂ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಶೇ.60 ಕನ್ನಡ ಭಾಷೆ ಬಳಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಯುವಜನ ಸೇನೆಯ ರಾಜ್ಯಾಧ್ಯಕ್ಷ ಶಿವಾನಂದ ವಾಲಿ ಇಲ್ಲಿನ ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಈ ಬಗ್ಗೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಕಡ್ಡಾಯವಾಗಿ ಎಲ್ಲ ನಾಮಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಭಾಷೆಯನ್ನು ಅಳವಡಿಸುವಂತೆ ಆದೇಶವಾದರೂ ಬಹುತೇಕ ನಾಮಫಲಕಗಳನ್ನು ಬದಲಾಯಿಸಿಲ್ಲ. ಇದು ಭಂಡತನದ ಪ್ರದರ್ಶನವಾದಂತಿದೆ. ಕೂಡಲೇ ನಾಮಫಲಕಗಳ ಕುರಿತು ಇರುವ ಆದೇಶವನ್ನು ಚಾಚೂ ತಪ್ಪದೇ ಪಾಲಿಸುವಲ್ಲಿ ಮುಖ್ಯಾಧಿಕಾರಿಗಳು ಕ್ರಮವಹಿಸಬೇಕು. ಡಿ.25 ರ ಒಳಗಾಗಿ ಎಲ್ಲಾ ನಾಮಫಲಕಗಳಲ್ಲಿ ಶೇ60 ರಷ್ಟು ಕನ್ನಡ ಭಾಷೆಯ ಬದಲಾವಣೆ ಮಾಡಬೇಕು. ತಪ್ಪಿದ್ದಲ್ಲಿ ಅಂದು ವಿವಿಧ ಕನ್ನಡಪರ ಸಂಘಟನೆಗಳ ಬೆಂಬಲದೊಂದಿಗೆ ಪುರಸಭೆಯ ಎದುರು ಉಗ್ರ ಹೋರಾಟ ಹಮ್ಮಿಕೊಳ್ಳುವ ಎಚ್ಚರಿಕೆಯ ಸಂದೇಶವನ್ನು ರವಾನಿಸಿದರು.

## ನ.21ರಿಂದ ಪಿಂಚಣಿ ಅದಾಲತ್ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ತಿಕೋಟಾ ತಾಲೂಕಿನಲ್ಲಿ ನಾನಾ ಗ್ರಾಮಗಳಲ್ಲಿ ನವೆಂಬರ್ 21 ರಿಂದ 29ರ ವರೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರ ಸೂಚನೆಯಂತೆ ಸಾಮಾಜಿಕ ಭದ್ರತೆ ಯೋಜನೆಗಳನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವ ಸಲುವಾಗಿ ನಾನಾ ಪಿಂಚಣಿ ಅದಾಲತ ಆಯೋಜಿಸಲಾಗಿದೆ.

ನವೆಂಬರ್ 21 ರಂದು ಬೆಳಿಗ್ಗೆ 11 ಗಂಟೆಗೆ ಅರಕೇರಿಯಲ್ಲಿ, ಮಧ್ಯಾಹ್ನ 1 ಗಂಟೆಗೆ ಬರಟಗಿ ಗ್ರಾಮದಲ್ಲಿ, ನವೆಂಬರ್ 22 ರಂದು ಬೆಳಿಗ್ಗೆ 11 ಗಂಟೆಗೆ ಲೋಹಗಾಂವದಲ್ಲಿ, ಮಧ್ಯಾಹ್ನ 1 ಗಂಟೆಗೆ ಸಿದ್ದಾಪೂರ ಕೆ ಗ್ರಾಮದಲ್ಲಿ, ನವೆಂಬರ್ 23 ರಂದು ಬೆಳಿಗ್ಗೆ 11 ಗಂಟೆಗೆ ಹೊನವಾಡ, ಮಧ್ಯಾಹ್ನ 1 ಗಂಟೆಗೆ ಕೋಟ್ಯಾಳ, ನವೆಂಬರ್ 25 ರಂದು ಬೆಳಿಗ್ಗೆ 11 ಗಂಟೆಗೆ ತೊರವಿ(ಅತಾಲಟ್ಟಿ), ಮಧ್ಯಾಹ್ನ 1 ಗಂಟೆಗೆ ತಾಜಪೂರ ಎಚ್, ನವೆಂಬರ್ 26 ರಂದು ಬೆಳಿಗ್ಗೆ 11 ಗಂಟೆಗೆ ಜಾಲಗೇರಿ, ಮಧ್ಯಾಹ್ನ 1 ಗಂಟೆಗೆ ಟಕ್ಕಳಕಿ, ನವೆಂಬರ್ 27 ರಂದು ಬೆಳಿಗ್ಗೆ 11 ಗಂಟೆಗೆ ಬಿಜ್ಜರಗಿ, ಮಧ್ಯಾಹ್ನ 1 ಗಂಟೆಗೆ ಬಾಬಾನಗರದಲ್ಲಿ, ನವೆಂಬರ್ 28 ರಂದು ಬೆಳಿಗ್ಗೆ 11 ಗಂಟೆಗೆ ಘೋಣಸಗಿ, ಮಧ್ಯಾಹ್ನ 1 ಗಂಟೆಗೆ ಕನಮಡಿ ಗ್ರಾಮಗಳಲ್ಲಿ ಪಿಂಚಣಿ ಅದಾಲತ ನಡೆಸಲಾಗುತ್ತಿದೆ. ನವೆಂಬರ್ 29 ರಂದು ಮಧ್ಯಾಹ್ನ 1 ಗಂಟೆಗೆ ತಿಕೋಟಾ ಪಟ್ಟಣದಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ. ಈ ಪಿಂಚಣಿ ಅದಾಲತ ಕುರಿತು ಈಗಾಗಲೇ ಆಯಾ ಗ್ರಾಮಗಳಲ್ಲಿ ಜನರಿಗೆ ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಅರ್ಹ ಫಲಾನುಭವಿಗಳು ನಿಗದಿತ ದಿನಾಂಕಗಳಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಾನಾ ಸಾಮಾಜಿಕ ಭದ್ರತೆ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಚಿವ ಕಚೇರಿ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

## ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ 2025ರ ಅಂಗವಾಗಿ ವಿಜಯಪುರ ಜಿಲ್ಲಾ ಮಟ್ಟದ ಸಿರಿಧಾನ್ಯಪಾಕಸ್ಪರ್ಧೆ ಏರ್ಪಡಿಸಲಾಗಿದೆ. ರಾಜ್ಯಮಟ್ಟದ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕಾಗಿ ಜಿಲ್ಲೆಯಿಂದ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು,ಕೃಷಿ ಇಲಾಖೆ ಅಧಿಕಾರಿ-ಸಿಬ್ಬಂದಿ ಹೊರತುಪಡಿಸಿ, ಜಿಲ್ಲೆಯ ಎಲ್ಲ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ.

ಸಿರಿ ಧಾನ್ಯ ಪಾಕಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಚಿಸುವವರು ತಮ್ಮ ಹೆಸರನ್ನು ನವೆಂಬರ್ 28ರೊಳಗಾಗಿ ವಿಜಯಪುರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ದೂರವಾಣಿ 08277930611 ಸಂಖ್ಯೆಗೆ ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಳಂದ್ ಆರೋಗ್ಯಾಧಿಕಾರಿ ಡಾ. ಅಂಬೂರೆ ಅಮಾನತ್ತು



ಕಲಬುರಗಿ: ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಆಳಂದ್ ತಾಲ್ಲೂಕಿನ ಆರೋಗ್ಯ ಅಧಿಕಾರಿ(ಟಿಎಓ) ಡಾ. ಸುಶೀಲಕುಮಾರ್ ಅಂಬೂರೆ ಅವರನ್ನು ಕೆಲಸದಿಂದ ಅಮಾನತ್ತು ಮಾಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಶಿವಕುಮಾರ್ ಕೆ.ಬಿ., ಅವರು ತಿಳಿಸಿದ್ದಾರೆ.

ತಾಲ್ಲೂಕಿನ ವೈದ್ಯರು ಹಾಗೂ ಸಿಬ್ಬಂದಿಗೆ ಕಿರುಕುಳ ನೀಡಿ ಹಣ ವಸೂಲಿ ಮಾಡುತ್ತಿದ್ದರು ಎಂಬ ಆರೋಪ ಮತ್ತು ರಾಜಕೀಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮತ್ತೊಂದು ಆರೋಪದ ಹಿನ್ನೆಲೆಯಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿ ವಿರುದ್ಧ ಹಲವಾರು ದೂರುಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಲು ಸೂಚಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

## ಹಾಲಿ ಅದ್ಯಕ್ಷನ ವಿರುದ್ದ ಗೆದ್ದು ಬೀಗಿದ ಶಿವಕುಮಾರ ಡಂಬಳ

■ ಉದಯರಶ್ಮಿ ದಿನಪತ್ರಿಕೆ



ಯಡ್ರಾಮಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಯಡ್ರಾಮಿ ತಾಲೂಕು ಶಾಖೆಗೆ 2024-29ನೆಯ ಅವಧಿಗೆ ಮೂರು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅದ್ಯಕ್ಷ ಸ್ಥಾನಕ್ಕೆ ಶಿವಕುಮಾರ ಡಂಬಳ, ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ನೌಕರ ಆನಂದ ತಂಗಾ ಹಾಗೂ ಖಜಾಂಚಿ ಸ್ಥಾನಕ್ಕೆ ನಿಜಲಿಂಗಪ್ಪ ಮಾನ್ವಿ ಆಯ್ಕೆಯಾದರು.ಪಟ್ಟಣದ ಸರಕಾರಿ ನೌಕರರ ಸಂಘದ ಕಛೇರಿಯಲ್ಲಿ ಶನಿವಾರ ಚು ನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಶಿವಕುಮಾರ ಡಂಬಳ, ಬಲವಂತ್ರಾಯ ಬಿರಾದಾರ, ರಾ ಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ಆನಂದ ತಂಗಾ, ರವೀಂದ್ರ ಗಜಕೋಷ, ಖಜಾಂಚಿ ಸ್ಥಾನಕ್ಕೆ ನಿಜಲಿಂಗಪ್ಪ ಮಾನ್ವಿ, ಭೀ ಮರಾಯ ಸ್ಪರ್ದಿಸಿದ್ದರು. ನಂತರ ನಡೆದ ಮತ ಎಣಿಕೆಯಲ್ಲಿ ಸ್ಪರ್ದಿಸಿದ ಎಲ್ಲ ಅಭ್ಯರ್ಥಿಗಳು ತಲಾ 13 ಮತ ಪಡೆದರು. ನಂತರ ಚೀಟಿ ಎತ್ತುವ ಮೂಲಕ ಅದ್ಯಕ್ಷ ಸ್ಥಾನಕ್ಕೆ ಶಿವಕುಮಾರ ಡಂಬಳ, ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ನೌಕರ ಆನಂದ ತಂಗಾ ಹಾಗೂ ಖಜಾಂಚಿ ಸ್ಥಾನಕ್ಕೆ ನಿಜಲಿಂಗಪ್ಪ ಮಾನ್ವಿ ಆಯ್ಕೆಯಾದರು. ಈ ವೇಳೆ ಮುಖ್ಯ ಚುನಾವಣಾ ಅಧಿಕಾರಿ ಪ್ರಭುಲಿಂಗಯ್ಯ ಹಿರೇಮಠ, ಸಹಾಯಕ ಚುನಾವಣಾ ಅಧಿಕಾರಿ ನಿಂಗಣ್ಣ ನಾಯ್ಕೋಡಿ ಹಾಗೂ ಕಿರಣಕುಮಾರ, ಬಸವರಾಜ ಬಡಿಗೇರ, ಶಾಂತಗೌಡ ಪಾಟೀಲ ಹಂಚಿನಾಳ ಪಿಎಸ್ಸೈ ವಿಶ್ವನಾಥ ಮುದರೆಡ್ಡಿ, ಕೆಂಚಪ್ಪ ಡೋಣಿ, ಭೀಮರಾಯ ಬಿಳವಾರ ಇದ್ದರು.

## ಹಲಕರ್ಟಿ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲೂಕು ಹಲಕರ್ಟಿ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಪ್ರಾರಂಭವಾಗಿದೆ. ನ.17 ರ ರಾತ್ರಿ ಸಕಲ ವಾದ್ಯವೈಭವಗಳೊಂದಿಗೆಪಲ್ಲಕ್ಕಿಸೇವೆಶೆಟ್ಟಿಯವರ ಮನೆಗೆ ಹೋಗುವದು, 18ರಂದು ಮೈಲಾರಲಿಂಗ ರಥೋತ್ಸವ ಜರುಗಲಿದೆ. ದೇವಸ್ಥಾನದಲ್ಲಿ ಕಳ್ಳಸರಪಳಿ ಕಾರ್ಯಕ್ರಮ ಜರುಗಲಿದೆ. ಕರ್ನಾಟಕದ ಮೂಲೆ ಮೂಲೆಯ ಸೇರಿದಂತೆ ಸುತ್ತಮುತ್ತಲಿನ ರಾಜ್ಯದ ಭಕ್ತಾದಿಗಳು ಬಂದುಸೇವೆನೀಡುವಪವಿತ್ರಅಗ್ನಿಕುಂಡದಪ್ರವೇಶ ನ.19 ರ ರಾತ್ರಿ 11ಗಂಟೆಗೆ ಜರುಗಲಿದೆ. ನ20 ರಂದು ಸಂಜೆ ಮದ್ದು ಸುಡುವ ಕಾರ್ಯಕ್ರಮದ ಬಳಿಕ

## ಭಕ್ತಿ ಎಂಬ ಭಾವ ದೊಡ್ಡದು :ಶಿವಲಿಂಗಯ್ಯ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಜೀವನದಲ್ಲಿ ಧರ್ಮ ಮತ್ತು ನೀತಿಗಳನ್ನು ಅಳವಡಿಸಿಕೊಂಡಾಗ ಮಾತ್ರ ಸನ್ಮಾರ್ಗದತ್ತ ತೆರಳಲು ಸಾಧ್ಯ ಎಂದು ಪ್ರವಚನಕಾರ ಶಿವಲಿಂಗಯ್ಯ ಶರಣರು ಪುರಾಣಿಕಮಠ ಹೇಳಿದ ರು. ಪಟ್ಟಣದ ಪಂಚಾ ಚಾರ್ಯ ಕಲ್ಯಾಣ ಮಂಟಪದಲ್ಲಿ ಶ್ರೀ ದಾನಮ್ಮಾದೇವಿ ಕಾರ್ತಿಕ 5ನೇ ಜಾತ್ರಾ ಮಹೋತ್ಸವದ ಅಂಗವಾಗಿ ಇತ್ತೀಚಿಗೆ ಆರಂಭಗೊಂಡ ಪುರಾಣ ಕಾರ್ಯಕ್ರಮದಲ್ಲಿ ಗುರುವಾರ ಪ್ರವಚನ ನೀಡಿ ಮಾತನಾಡಿದರು. ಭಕ್ತಿ ಎಂಬ ಭಾವ ದೊಡ್ಡದು. ಎಂದಿಗೂ ನಾವು ನಮ್ಮ ಮೂಲವನ್ನು ಮರೆಯಬಾರದು. ಗಡಿಯಾರ ನಿಂತ ಮಾತ್ರಕ್ಕೆ ಕಾಲ ನಿಲ್ಲುವುದಿಲ್ಲ ಆದ್ದರಿಂದ ಸಮಯಕ್ಕೆ ಕಾಯದೇ ಸತ್ಸಂಗದಲ್ಲಿ ಸೇವೆ ಮಾಡುವ ಅವಕಾಶ ದೊರೆತಾಗ ಸದುಪಯೋಗ ಪಡೆಸಿಕೊಳ್ಳಬೇಕು ಎಂದರು. ದಿ:11 ರಂದು ಸೋಮವಾರದಿಂದ ದಿ:25 ರವರೆಗೆ ಸಿದ್ಧಿಪುರುಷ ಲಚ್ಯಾಣ ಸಿದ್ದಪ್ಪ ಮಹಾರಾಜರ ಪುರಾಣ ಜರುಗಲಿದ್ದು ದಿ:25 ರಂದು ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶ್ರೀಗಳು ಆಗಮಿಸಲಿದ್ದಾರೆ. ಎಮ್ಮಿಗನೂರ ಹಂಪಿ ಸಾವಿರ 'ದೇವರಮಠದ ವಾಮದೇವ ಮಹಾಂತ ಶ್ರೀಗಳಿಂದ ಲಕ್ಷ ದೀಪೋತ್ಸವ ಉದ್ಘಾಟನೆಯಾಗಲಿದೆ. ಈ ಎಲ್ಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಭಾಗಿಯಾಗುವಂತೆ ಕರೆ ನೀಡಿದರು. ಜಂಗಮಾಭಿವೃದ್ಧಿ ಸಂಘದ ತಾಲ್ಲೂಕು ಅಧ್ಯಕ್ಷ ಸೋಮಶೇಖರ ಹಿರೇಮಠ, ಕಲ್ಯಾಣ ಮಂಟಪದ ಅಧ್ಯಕ್ಷ ಬಸಯ್ಯ ಮಲ್ಲಿಕಾರ್ಜುನಮಠ, ಶಾಂತಗೌಡ ಬಿರಾದಾರ ' (ಯರನಾಳ), ಗೊಲ್ಲಾಳಪ್ಪಗೌಡ ಪಾಟೀಲ, ಅಶೋಕ ಬಬಲೇಶ್ವರ, ಉಮಾಕಾಂತ ಸೊನ್ನದ, ಬಂಡೆಪ್ಪ ಬಿರಾದಾರ (ದಿಂಡವಾರ), ಸಂಗೀತಗಾರ ಶಿವಯ್ಯ ಜೇರಟಗಿ, ತಬಲಾವಾದಕ ಸಾಹೇಬಗೌಡ ಮುಳಸಾವಳಗಿ ಸಹಿತ ಮಹಿಳೆಯರು, ಮಕ್ಕಳು ಇದ್ದರು.

## ಸಂಪ್ರದಾಯ ಉಳಿಸಿಕೊಂಡಲ್ಲಿ ಬದುಕಿನಲ್ಲಿ ಯಶಸ್ಸು :ಗೀತಾ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ನಮ್ಮ ಪೂರ್ವಜರು ಹಾಕಿಕೊಟ್ಟ ಸಂಪ್ರದಾಯ ಉಳಿಸಿಕೊಂಡಲ್ಲಿ ಮಾತ್ರ ನಮ್ಮ ಬದುಕು ಯಶಸ್ಸಾಗುತ್ತದೆ ಎಂದು ಆಡಳಿತಾಧಿಕಾರಿ ದೀಪಾ ದೇ ಸಾಯಿ ಹೇಳಿದರು. ಪಟ್ಟಣದ ಆಲಮಟ್ಟಿ ರಸ್ತೆಯಲ್ಲಿರುವ ಲ ಯನ್ಸ್ ಪ್ರಾಥಮಿಕ ಶಾಲೆಯಲ್ಲಿ ಶಿರಸಿಯ ಸೋಂದಾ ಸ್ವರ್ಣವಲ್ಲೀ ಸಂಸ್ಥಾನದ ಯತಿವರೇಣ್ಯರಾದ ಶ್ರೀಮಜ್ಜಗದ್ಗುರು ಶಂಕರಾ ಚಾರ್ಯ ಶ್ರೀಮದ್ ಗಂ ಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಆಯೋಜಿಸಿರುವ ಭಗವದ್ಗೀತಾ ಅಭಿಯಾನ ಕರ್ನಾಟಕ-2024 ಸಂಬಂಧಿ ಶ್ಲೋಕ ಪಠಣ ಕೇಂದ್ರದಲ್ಲಿ ಅವರು ಮಾತನಾಡಿದರು. ಭಗವದ್ಗೀತೆಯು ಮನುಷ್ಯನ ಬದುಕಿನಲ್ಲಿ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಸಹಾಯಕ್ಕೆ ಬರುವಂತಹ ಗ್ರಂಥವಾಗಿದೆ. ಧರ್ಮಗ್ರಂಥಗಳು ನಮ್ಮ ಬದುಕಿನ ಕನ್ನಡಿಯಾಗಿದೆ. ನಮ್ಮ ಸಂಸ್ಕೃತಿ ನಮ್ಮ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ಗೀತಾ ಅಧ್ಯಯನದ ನಿರಂತರತೆಯನ್ನು ಶಾಲೆಯಲ್ಲಿ ಕಾಯ್ದುಕೊಂಡು ಅಭ್ಯಾಸ ಮಾಡಿಸುತ್ತೇನೆಂದು ಹೇಳಿದರು. ಸಂಚಾಲಕ ರಾಮಚಂದ್ರ ಹೆಗಡೆ ಅಭಿಯಾನದ ಗುರಿ ಉದ್ದೇಶಗಳ ಮೇಲೆ ಪ್ರಾಸ್ತಾವಿಕ ಮಾತನಾಡಿದರು. ಈ ವೇಳೆ ಮುಖ್ಯಗುರು ಯಶೋಧರ ಮೀರಜಕರ್, ರತ್ನಾಬಾಯಿ ಹಾದಿಮನಿ, ಶ್ರೀದೇವಿ ಹಲ್ಯಾಳ್, ಮೀನಾ ದಾಸ್, ನಿಖಿತಾ ಎಲ್, ಕುಮಾರ ಇಂಗಳೇಶ್ವರ, ರಂಜಿತಾ ಭಟ್ಟ, ರೂಪಾ ನಾಟಿಕರ್, ಸೌಮ್ಯ ಹಿರೇಮಠ, ಅನುಷಾ ಭಜಂತ್ರಿ, ಭವಾನಿ ಝಿಂಗಾಡೆ, ಸೃಷ್ಟಿ ಚಲವಾದಿ, ಅಂಕಿತಾ ಬಾದರದಿನ್ನಿ, ಸಂಗೀತಾ ಕುಂ ಬಾರ, ಸುಹಾನ ಮುಲ್ಲಾ ಯಶೋದಾ ಬಿರಾದಾರ, ದಾನೇಶ್ವರಿ ಅಂಬಿಗೇರ, ಅಭಿರಾಮ ಹೆಗಡೆ. ಸೇರಿದಂತೆ ಹಾಜರಿದ್ದರು.

## ತರಬೇತಿ ಶಿಬಿರಕ್ಕೆ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2024-25ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾದ ವಿವಿಧ ತರಬೇತಿಗಳಿಗೆ ಪರಿಶಿಷ್ಟ ಜಾತಿ ಯುವಕ-ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ:28-11-2024 ರಿಂದ ದಿ:17-12-2024ರ 20ದಿನಗಳವರೆಗೆ ಎಸ್.ಎಸ್.ಎಲ್‌ಸಿ ಪಾಸ್/ಫೇಲ್ ಆದವರಿಗೆ ಹೊಲಿಗೆ ತರಬೇತಿ ಶಿಬಿರವನ್ನು, ದಿನಾಂಕ:06-12-2024 ರಿಂದ 17-12-2024ರವರೆಗೆ 12 ದಿವಸಗಳವರೆಗೆ ದ್ವಿತಿಯ ಪಿಯುಸಿ ಪಾಸ್/ಫೇಲ್ ಆದ ಅಭ್ಯರ್ಥಿಗಳಿಗೆ ವಿಡಿಯೋಗ್ರಾಫಿ ತರಬೇತಿ ಶಿಬಿರವನ್ನು ಬೆಂಗಳೂರಿನ ಕುಂಬಳಗೋಡು ಕೇಂದ್ರದಲ್ಲಿ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ದಿನಾಂಕ:03-12-2024 ರಿಂದ 17-12-2024ರವರೆಗೆ 15ದಿನಗಳ ಕಾಲ ದ್ವಿತಿಯ ಪಿಯುಸಿ ಪಾಸ್/ಫೇಲ್ ಆದ ಅಭ್ಯರ್ಥಿಗಳಿಗೆ ಜಿಮ್-ಫಿಟ್ನೆಸ್ ತರಬೇತಿ ಶಿಬಿರವನ್ನು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತಿಯುಳ್ಳ 18 ರಿಂದ 40 ವರ್ಷದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪಾಸ್ ಮತ್ತು ಫೇಲ್ ಆದ ಯುವಕ/ಯುವತಿಯರು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿಜಯಪುರ ಕಚೇರಿ ಮೂಲಕ ಅರ್ಜಿ ಪಡೆದು, ದಿನಾಂಕ:22-11-2024ರ ಸಂಜೆ 5 ಗಂಟೆಯೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 08352-251085, ಮೊ.ಸಂಖ್ಯೆ: 8792185141 ಅನ್ನು ಸಂಪರ್ಕಿಸುವಂತೆ ಎಂದು ವಿಜಯಪುರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

## ನಾಲ್ಕು ಜೋಡಿ ನೂತನ ಬಾಳಿಗೆ ಪಾದಾರ್ಪಣೆ; ಸಾಕ್ಷಿಯಾದ ಬಿ. ವೀರಪ್ಪ: ಕಲಬುರಗಿ ಮಹಿಳಾ ನಿಲಯದ ಮಂತ್ರ-ಮಾಂಗಲ್ಯ



ಕಲಬುರಗಿ:ನಿತ್ಯ ದೂರು-ದುಮ್ಮಾನ, ವಿಚಾರಣೆ, ತಪಾಸಣೆ, ದಾಳಿ, ನೋಟೀಸ್ ಅಂತ ನಿತ್ಯ ಬಿಡುವಿಲ್ಲದ ಜಂಜಾಟದಲ್ಲಿ ಮಗ್ನರಾಗುವ ಕರ್ನಾಟಕ ರಾಜ್ಯ ಉಪ ಲೋಕಾಯುಕ್ತ ಗೌರವಾನ್ವಿತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಇಂದು ಬಾಂಧವ್ಯ ಬೆಸೆಯುವ ಕ್ಷಣಕ್ಕೆ ಸಾಕ್ಷಿಯಾದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಲಬುರಗಿ ರಾಜ್ಯ ಮಹಿಳಾ ನಿಲಯದ ನಿವಾಸಿಗಳಾದ ನಾಲ್ಕು ಹೆಣ್ಣು ಮಕ್ಕಳ "ಮಂತ್ರ-ಮಾಂಗಲ್ಯ" ಸಮಾರಂಭದಲ್ಲಿ ಪಾಲ್ಗೊಂಡು ನೂತನ ಜೋಡಿಗಳಿಗೆ ಆಶೀರ್ವದಿಸಿದರು. ಹೌದು, ಕಲಬುರಗಿಯ ರಾಜ್ಯ ಮಹಿಳಾ ನಿಲಯದಲ್ಲಿ ಇಂದು ಸಂಭ್ರಮದ ವಾತಾವರಣ ಮನೆಮಾಡಿತ್ತು. ನಾಲ್ಕು ಜೋಡಿಗಳು ಇಂದು ನೂತನ ಬಾಳಿಗೆ ಪಾದಾರ್ಪಣೆ ಮಾಡಿದ್ರು.ಸುಜಾತಾ ತಂದೆ ಬಸವರಾಜ ಇವರನ್ನು ರಾಯಚೂರಿನ ಪ್ರವೀಣ ತಂದೆ ಜನಾರ್ಧನ ಕೈಹಿಡಿದರು. ಭವಾನಿ ತಂದೆ ಬಸವರಾಜ ರನ್ನು ತುಮಕೂರು ಜಿಲ್ಲೆಯ ಮಾದಿಹಳ್ಳಿ ಗ್ರಾಮದ ಭರತ್.ಎಂ.ಎಸ್ ಅವರು ವರಿಸಿದರು. ಅಶ್ವಿನಿ ತಂದೆ ಶ್ರೀರಾಮ ಇವರನ್ನು ಬಳ್ಳಾರಿಯ ಸಮರ್ಥ ಹಾಗೂ ಪ್ರಿಯಾಂಕಾರನ್ನು ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಕೊಡ್ಲಾ ಗ್ರಾಮದ ವೀರಾರೆಡ್ಡಿ ಅವರು ಬಾಳ ಸಂಗಾತಿಯಾಗಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಉಪ ಲೋಕಾಯುಕ್ತರು ಸೇರಿದಂತೆ ಆಗಮಿಸಿದ್ದ ಗಣ್ಯರು ಆಶೀರ್ವದಿಸಿ ಮಾಂಗಲ್ಯ ಧಾರಣೆ ಮಾಡಿಸಿದ್ರು. ಈ ಸಂದರ್ಭದಲ್ಲಿ ಮಾತನಾಡಿದ ಉಪ ಲೋಕಾಯುಕ್ತರು, ದುಂದು ವೆಚ್ಚ ಮಾಡದೇ ಸರಳ ವಿವಾಹಗಳು ಎಲ್ಲೆಡೆ ನಡೆಯಬೇಕು ಎಂದು ಕರೆ ನೀಡಿದರು. ಇಂದು ಮದುವೆಗೆಂದು ಬಡವರು ಸಾಲಮಾಡಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ. ಜಮೀನು, ದನ-ಕರು ಹೀಗೆ ತಮ್ಮ ಬಳಿ ಇರುವ ಆಸ್ತಿಯನ್ನು ಮಾರಿ ಮದುವೆ ಮಾಡುತ್ತಾರೆ. ಆದರೆ, ಇಂದು ಇಲ್ಲಿ ನಡೆದ ಸರಳ ವಿವಾಹ ನಿಜಕ್ಕೂ ಮಾದರಿ ಎಂದು ಜಿಲ್ಲಾಡಳಿತ ಮತ್ತು ರಾಜ್ಯ ಮಹಿಳಾ ನಿಲಯಕ್ಕೆ ಶಬ್ಬಾಗಿರಿ ನೀಡಿದರು.



## ಆರ್.ಎನ್ ಶಾಲೆಗೆ ಪ್ರಥಮ ಬಹುಮಾನ

ಕಲಬುರಗಿ:ಕನ್ನಡ ರಾಜ್ಯೋತ್ಸವದ ಅಂಗವಾಗಿ ಎಸ್.ಆರ್.ಎನ್ ಮೆಹತಾ ಶಾಲೆಯು ಆಯೋಜಿಸಿದ್ದ ಅಂತರ್ ಶಾಲಾ ಜಾನಪದ ಸಮೂಹ ನೃತ್ಯ ಸ್ಪರ್ಧೆಯಲ್ಲಿ ನಗರದ ಪ್ರತಿಷ್ಠಿತ ಶಾಲೆಯಾದ ವಿವೇಕಾನಂದ ವಿದ್ಯಾ ನಿಕೇತನ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದರು. ವಿಜೇತರಿಗೆ ಸಂಸ್ಥೆಯ ಅಧ್ಯಕ್ಷ ಚಕೋರ ಮೆಹತಾ ಪ್ರಶಸ್ತಿ ಫಲಕ, ನಗದು ಬಹುಮಾನ ಹಾಗೂ ನೃತ್ಯ ನಿರ್ದೇಶಿಸಿದ ಪ್ರೇಮ ತೆಗನೂರ ಅವರಿಗೆ ವಿಶೇಷ ಪ್ರಶಂಸಾ ಪತ್ರ ನೀಡಿ ಗೌರವಿಸಿದರು. ವಿಜೇತ ಮಕ್ಕಳನ್ನು ಅಭಿನಂದಿಸಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಸುವರ್ಣ ಭಗವತಿ ಮಾತನಾಡುತ್ತ, ಶಿಕ್ಷಕರು ಹಾಗೂ ಪೋಷಕರು ಮಕ್ಕಳ ಅಂಕಗಳ ಬೆನ್ನು ಬೀಳದೇ, ಅವರಲ್ಲಿರುವ ಪ್ರತಿಭೆ ಗುರುತಿಸಿ ಬೆಳೆಸುವ ಪ್ರಯತ್ನ ಮಾಡಬೇಕು ಎಂದು ಹೇಳಿದರು. ವಿದ್ಯಾರ್ಥಿಗಳ ಈ ಸಾಧನೆಯನ್ನು ಶಾಲೆಯ ಪ್ರಾಂ ಶುಪಾಲ ಸಿದ್ದಪ್ಪ ಭಗವತಿ, ಶೈಕ್ಷಣಿಕ ಸಂಯೋಜಕಿ ಸುಮಾ ಭಗವತಿ, ಶಿಕ್ಷಕರು ಹಾಗೂ ಪಾಲಕರು ಮೆಚ್ಚುಗೆ ವ್ಯಕ್ತಪಡಿಸಿದರು.

## ಐನೆಕ್ಸ 2024 ರ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಪಡೆದುಕೊಂಡ ಪಿಡಿಎ ವಿದ್ಯಾರ್ಥಿಗಳು

ಕಲಬುರಗಿ:ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಇಂಡಿಯಾ ಅಂತಾರಾಷ್ಟ್ರೀಯ ಆವಿಷ್ಕಾರ ಮತ್ತು ಆವಿಷ್ಕಾರ ಎಕ್ಸಪೋ (ಐನೆಕ್ಸ)2024 ರ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಪಡೆಯುವುದರೊಂದಿಗೆ ಕಲಬುರ್ಗಿ ಜಿಲ್ಲೆಗೆ ಹಾಗೂ ಸಂಸ್ಥೆಗೆ ಮತ್ತು ಕಾಲೇಜಿಗೆ ಹೆಮ್ಮೆ ತಂದಿದ್ದಾರೆ. ನವೆಂಬರ್ 13 ರಿಂದ 15 ರವರೆಗೆ ದಕ್ಷಿಣ ಗೋವಾದ ಫಟೋರ್ಡಾದ ಡಾನ್ ಬಾಸ್ಕೋ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಈ ಸ್ಪರ್ಧೆಗಳಲ್ಲಿ 15 ಕ್ಕೂ ಹೆಚ್ಚು ದೇಶಗಳು ಸುಮಾರು 150 ಕ್ಕೂ ಹೆಚ್ಚು ಪ್ರತಿನಿಧಿಗಳ ಹೊಸ ಹೊಸ ಸಂಶೋಧನಾ ಆವಿಷ್ಕಾರಗಳ ಪ್ರೋಜೆಕ್ಟಗಳು ಪ್ರದರ್ಶನಗೊಂಡಿದ್ದವು. ಅದರಲ್ಲಿ ಪಿಡಿಎ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಾದ ಸಂಕೇತ ಕಾರ್,ಅವಂತಿಕಾ ಇನಾಂದಾರ್, ದಿವ್ಯ ದಾವಣಗೆರೆ,ನವೀದ್ ಅಖ್ತರ್ ಮತ್ತು ಸಾನಿದಾಸ್ ತಂಡದ ಸಂಶೋಧನಾ ಪ್ರೋಜೆಕ್ಟ ತಾಂತ್ರಿಕ ಕೌಶಲ್ಯದ ಬಳಕೆ, ಅತ್ಯುತ್ತಮವಾದ ಕಾರ್ಯವಿಧಾನದಿಂದ ತಿರ್ಪುಗಾರರ ಗಮನ ಸೆಳೆದು ಬೆಳ್ಳಿ ಪದಕವನ್ನು ಪಡೆಯಿತು ಈ ಐನೆಕ್ಸ 2024 ರ ಸ್ಪರ್ಧೆಗಳನ್ನು ಗೋವಾ ರಾಜ್ಯದ ಆವಿಷ್ಕಾರ ಮಂಡಳಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಇಂಡಿಯನ್ ಇನ್ನೋವೆಟರ್ಸ ಅಸೋಸಿಯೇಷನ್ ಸಹಯೋಗದಲ್ಲಿ ನಡೆಸಲಾಗಿತ್ತು.ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಕೆಲಸ ಮಾಡುತ್ತಿದೆ. ಇಂತಹ ಸಾಧನೆ ಮಾಡಿದ ಕಾಲೇಜಿನ ವಿದ್ಯಾರ್ಥಿಗಳ ತಂಡಕ್ಕೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ ಅಭಿನಂದನೆ ಸಲ್ಲಿಸಿ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ತಾಂತ್ರಿಕ ಕೌಶಲ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ಮಾಡುವುದರೊಂದಿಗೆ ಕಲಬುರ್ಗಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಹೇಳಿದರು.ಸಂಸ್ಥೆಯ ಉಪಾಧ್ಯಕ್ಷರಾದ ರಾಜಾ ಭಿ ಭೀಮಳ್ಳಿ, ಕಾರ್ಯದರ್ಶಿಗಳಾದ ಉದಯಕುಮಾರ್ ಚಿಂಚೋಳಿ ಜಂಟಿ ಕಾರ್ಯದರ್ಶಿಗಳಾದ ಡಾ ಕೈಲಾಸ ಪಾಟೀಲ್ ಪ್ರಾಚಾರ್ಯರಾದ ಡಾ ಸಿದ್ಧರಾಮ ಪಾಟೀಲ್,ಉಪ ಪ್ರಾಚಾರ್ಯರಾದ ಡಾ ಎಸ್ ಆರ್ ಹೊಟ್ಟಿ,ಡಾ ಭಾರತಿ ಹರಸೂರ, ಐಎಸ್ ಮತ್ತು ಎಐಎಂಎಲ್ ವಿಭಾಗದ ಮುಖ್ಯಸ್ಥರಾದ ಡಾ ಉದಯ ಬಾಲಗಾರ, ಸಿ ಎಸ್ ವಿಭಾಗದ ಡಾ ಸುಜಾತಾ ತೇರ್ದಾಳ, ಮಾರ್ಗದರ್ಶಕರಾದ ನಾಗೇಶ್ ಸಾಲಿಮಠ,ಡಾ ವಿಷ್ಣುಮೂರ್ತಿ ಬುರಕಪಳ್ಳಿ, ಅಶೋಕ್ ಪಾಟೀಲ್,ಪ್ರಿಯಾಂಕ ದೇವಣಿ, ಅಶ್ವಿನಿ ಹಟ್ಟಿ ವಿದ್ಯಾರ್ಥಿಗಳ ತಂಡದ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಿದರು ಎಂದು ಹೈದರಾಬಾದ್ ಕರ್ನಾಟಕದ ಶಿಕ್ಷಣ ಸಂಸ್ಥೆಯ ಮಾಧ್ಯಮ ಸಂಯೋಜಕ ಐ ಕೆ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲೋಕಾಯುಕ್ತ ಬಲ ಹೆಚ್ಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ:ನ್ಯಾ. ಬಿ.ವೀರಪ್ಪ



ಕಲಬುರಗಿ: ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ 20 ಸಾವಿರಕ್ಕೂ ಹೆಚ್ಚಿನ ಪ್ರಕರಣಗಳು ಬಾಕಿ ಇದ್ದು, ರಾತ್ರಿ 7-8 ಗಂಟೆ ವರೆಗೂ ಕುಳಿತು ಪ್ರಕರಣ ವಿಲೇವಾರಿ ಮಾಡುತ್ತಿದ್ದರು ಜನರ ನಿರೀಕ್ಷೆಗೆ ತಕ್ಕಂತೆ ತ್ವರಿತ ವಿಲೇವಾರಿಯಾಗುತ್ತಿಲ್ಲ. ಹೀಗಾಗಿ ಸಂಸ್ಥೆಗೆ ಹೆಚ್ಚಿನ ಅಧಿಕಾರಿ, ಸಿಬ್ಬಂದಿ ಬಲ ನೀಡುವುದರ ಜೊತೆಗೆ ಮೂಲಸೌಕರ್ಯ ಹೆಚ್ಚಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಕರ್ನಾಟಕ ಉಪ ಲೋಕಾಯುಕ್ತ ನ್ಯಾ. ಬಿ.ವೀರಪ್ಪ ಹೇಳಿದರು. ರವಿವಾರ ಇಲ್ಲಿನ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ತಮ್ಮ ಮೂರು ದಿನಗಳ ಕಲಬುರಗಿ ಪ್ರವಾಸ ಕಾರ್ಯಕ್ರಮದ ಕುರಿತು ವಿವರಿಸಲು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಓರ್ವ ಲೋಕಾಯುಕ್ತರು, ಇಬ್ಬರು ಉಪ ಲೋಕಾಯುಕ್ತರು 7 ಕೋಟಿ ಕನ್ನಡಿಗರ ಸಮಸ್ಯೆ ಆಲಿಸುವ ಪರಿಸ್ಥಿತಿ ಇದೆ. ಇಬ್ಬರು ಉಪ ಲೋಕಾಯುಕ್ತರು ತಲಾ 15 ಜಿಲ್ಲೆಗಳನ್ನು ಹಂಚಿಕೆ ಮಾಡಿಕೊಂಡು ಜಿಲ್ಲೆಗೆ ಹೋಗಿ ಅಲ್ಲಿಯೆ ದೂರುದಾರ-ನೌಕರರ ಸಮಕ್ಷಮ ಆಲಿಸಿ ಪ್ರಕರಣ ವಿಲೇವಾರಿಗೆ ಆದ್ಯತೆ ನೀಡಲಾಗುತ್ತಿದೆ ಎಂದ ಅವರು, ಕಲಬುರಗಿ ಮತ್ತು ಧಾರವಾಡ ವಿಭಾಗಕ್ಕ ಓರ್ವ ಲೋಕಾಯುಕ್ತರ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.ಇಡೀ ವಿಶ್ವದಲ್ಲಿಯೇ ಪ್ರ ಕರಣಗಳ ವಿಲೇವಾರಿ ಭಾರತ ಮುಂದಿದೆಯಾದರು ಇಲ್ಲಿನ ಜನಸಂಖ್ಯೆ ಹೆಚ್ಚಿರುವ ಕಾರಣ ಮತ್ತು ಕಾನುನುಬದ್ಧವಾಗಿ ದೂರು ಬಂದ ಕೂಡಲೆ ಸಂಬಂಧಿಸಿದವರಿಗೆ ನೋಟಿಸ್ ನೀಡಿ ಉತ್ತರ ಪಡೆದು, ಮತ್ತೆ ಅರ್ಜಿದಾರರಿಗೆ ಪ್ರತ್ಯುತ್ತರಕ್ಕೆ ಬರೆದು ಅವರಿಂದ ಲಿಖಿತ ಹೇಳಿಕೆ ಪಡೆದು ನಮ್ಮಿಂದ ತನಿಖೆ ಆರಂಭಿಸುವಂತಹ ಜಟಿಲ ಕಾರ್ಯವಿಧಾನದ ಕಾರಣ ಪ್ರಕರಣಗಳ ವಿಲೇವಾರಿ ತಡವಾಗುತ್ತಿದೆ ಎಂದರು.ತಮ್ಮ ಮೂರು ದಿನಗಳ ಕಲಬುರಗಿ ಪ್ರವಾಸದಲ್ಲಿ ಕಲಬುರಗಿ ಕೋಟೆ, ಸೂಪರ್ ಮಾರ್ಕೆಟ್ ಪ್ರದೇಶ, ಉದನೂರು ತ್ಯಾಜ್ಯ ವಿಲೇವಾರಿ ಘಟಕ, ಸರ್ಕಾರಿ ಶಾಲೆ, ಕೇಂದ್ರ ಬಸ್ ನಿಲ್ದಾಣ, ಬಾಲಕರ-ಬಾಲಕೀಯರ ವಸತಿ ನಿಲಯ, ಆಸ್ಪತ್ರೆ, ಕೇಂದ್ರ ಕಾರಾಗೃಹಕ್ಕೆ ಭೇಟಿ ಅಲ್ಲಿರುವಂತಹ ಲೋಪದೋಷ ಸರಿಪಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದ ನ್ಯಾ.ಬಿ.ವೀರಪ್ಪ ಅವರು, ಕಲಬುರಗಿ ಕೋಟೆ ಸುತ್ತ 2 ತಿಂಗಳಲ್ಲಿ ಸ್ವಚ್ಛತೆ ಕೈಗೊಳ್ಳದಿದ್ದರೆ ಮುಂದಿನ ದಿನದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಲಾಗುವುದೆಂದು ಈಗಾಗಲೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದೇನೆ ಎಂದರು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪತ್ರಿಕಾ ರಂಗಗಳು ಇತ್ತೀಚೆಗೆ ನಿಶಕ್ತವಾಗಿವೆ. ಈ ನಾಲ್ಕು ಅಂಗಗಳು ಸರಿಯಾಗಿ ಕೆಲಸ ನಿರ್ವಹಿಸಿದಲ್ಲಿ ಭ್ರಷ್ಟಾಚಾರ ಕಿತ್ತೊಗೆಯಬಹುದಾಗಿದೆ ಎಂದ ಅವರು, ಚುನಾವಣೆ ಸಮಯದಲ್ಲಿ ಜನ ಜನಪ್ರತಿನಿಧಿಗಳ ಮುಂದೆ ಬಿಡಿ ಕಾಸಿಗೆ ಕೈ ಚಾಚುವುದನ್ನು ನಿಲ್ಲಿಸಬೇಕಿದೆ. ಪ್ರತಿ ಮನೆಯಿಂದ ಭ್ರಷ್ಟಾಟಾರ ನಿರ್ಮೂಲನೆ ಆಗಬೇಕಿದೆ. ಓರ್ವ ವ್ಯಕ್ತಿ, ಲೋಕಾಯುಕ್ತ ಸಂಸ್ಥೆಯಿಂದ ಮಾತ್ರ ಸಮಾಜ ತಿದ್ದಲು ಅಸಾಧ್ಯ. ದೇಶಕ್ಕೆ ಕಂಟಕವಾಗಿರುವ ಭ್ರಷ್ಟಾಚಾರ ನಿರ್ಮೂಲನೆಗ ಎಲ್ಲರ ಸಹಕಾರ ಮತ್ತು ಜನಾಂದೋಲನ ಅಗತ್ಯವಿದೆ ಎಂದರು. ಬಸ್ ಸೇವೆ ಆರಂಭ, ಚೀಟಿ ಬರೆಯುವುದಕ್ಕೆ ಬ್ರೆಕ್: ಮೂರು ದಿನ ಪ್ರವಾಸದ ಫಲಪ್ರಧವಾಗಿ ಕಲಬುರಗಿ ರೈಲ್ವೆ ನಿಲ್ದಾಣದಿಂದ ಸುಪರ್ ಮಾರ್ಕೆಟ್ ಹಾಗೂ ಇತರೆ ಪ್ರದೇಶಕ್ಕೆ ಬಸ್ ಸೌಕರ್ಯ ಇಲ್ಲದಿರುವುದನ್ನು ಕಂಡು ಕೂಡಲೆ ಸರಿಪಡಿಸುವಂತೆ ಕೆ.ಕೆ.ಆರ್.ಟಿ.ಸಿ.ಗೆ ಸೂಚನೆ ನೀಡಿದ ಪರಿಣಾಮ ರೈಲು ನಿಲ್ದಾಣದಿಂದ ವಿವಿಧ ಸ್ಥಳಕ್ಕೆ ಬೆಳಿಗ್ಗೆ ಮತ್ತು ಸಾಯಂಕಾಲ 9 ಟ್ರಿಪ್ ಬಸ್ ಸಂಚಾರ ಆರಂಭಿಸಲಾಗಿದೆ. ಇದಲ್ಲದೆ ಕಲಬುರಗಿ-ಹರಕಂಚಿ ಮತ್ತು ಕಲಬುರಗಿ ಕೇಂದ್ರ ಬಸ್ ನಿಲ್ದಾಣದಿಂದ ಸೂಪರ್ ಮಾರ್ಕೆಟ್ ಪ್ರದೇಶಕ್ಕೆ 2 ಹೆಚ್ಚುವರಿ ಬಸ್ ಸಂಚಾರ ಆರಂಭಗೊಂಡಿದೆ. ಆಸ್ಪತ್ರೆಯಲ್ಲಿ ಯಾ ವುದೇ ಕಾರಣಕ್ಕೂ ಹೊರಗಡೆಯಿಂದ ಔಷಧಿ ತರಲು ರೋಗಿಗಳಿಗೆ ಸೂಚಿಸಿದಂತೆ ವೈದ್ಯರಿಗೆ ತಾಕೀತು ಮಾಡಿದ ಪರಿಣಾಮ ಡಿ.ಎಚ್.ಓ. ಅವರು ಈಗಾಗಲೆ ಆಸ್ಪತ್ರೆಗಳಿಗೆ ರೋಗಿಗಳಿಗೆ ಹೊರಗಡೆಯಿಂದ ಔಷಧಿ ತರದಂತೆ ವೈದ್ಯರು ಚೀಟಿ ಬರೆದು ಕೊಡಬಾರದೆಂದು ಸುತ್ತೋಲೆ ಹೊರ 'ಡಿಸಿದ್ದಾರೆ. ಕಾಳಗಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ 1 ಎಕರೆ 20 ಗುಂಟೆ ಜಮೀನು ಸ್ಮಶಾನಕ್ಕೆ ಮೀಸಲಿಡಲಾಗಿದೆ. ಪೇಠಶಿರೂರು ಗ್ರಾಮದ ರೈತ ಶಾಂತಕುಮಾರ ಕೋ ರಿಕೆಯಂತೆ ಜಮೀನು ಹೆಸರಿನ ಬದಲಾವಣೆ ಮಾಡಲಾಗಿದೆ. ಗ್ರಾಮಸ್ಥರ ಆರೋಗ್ಯ ಮೇಲೆ ಗಂಭೀರ ಪರಿಣಾಮ ಬೀರುವ ಉದನೂರಿನಲ್ಲಿ ತ್ಯಾಜ್ಯ ಸಂಗ್ರಹಿಸಿದಕ್ಕೆ ಸ್ವಯಂ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ನ್ಯಾಯಮೂರ್ತಿ ಬಿ.ವೀರಪ್ಪ ಮಾಹಿತಿ ನೀಡಿದರು.ಪ್ರವಾಸದ ಮೊದಲನೇ ದಿನದಂದು ಬೆಳಿಗ್ಗೆಯಿಂದ ರಾತ್ರಿ ವರೆಗೆ ಸಾರ್ವಜನಿಕರ ಅಹವಾಲು ಆಲಿಸಲಾಗಿದ್ದು, ಸಲ್ಲಿಕೆಯಾದ ಸುಮಾರು 350 ಅರ್ಜಿ ಪೈಕಿ 70ಕ್ಕೆ ಸ್ಥಳದಲ್ಲಿಯೆ ಪರಿಹಾರ ಕಲ್ಪಿಸಿದೆ. ಕೆಲ ಪ್ರಕರಣಗಳನ್ನು ದೂರು ದಾಖಲಿ ಸಿಕೊಂಡಿದ್ದೇವೆ. ಇನ್ನು ಈಗಾಗಲೆ ದಾಖಲಾದ ಪ್ರಕರಣಗಳ ಪೈಕಿ ಹಳೆಯ 50 ಮತ್ತು ಹೊಸದಾಗಿ ಸಲ್ಲಿಸಿದ 48 ಪ್ರಕರಣಗಳನ್ನು ಕಲಬುರಗಿಯಲ್ಲಿಯೇ ಇತ್ಯರ್ಥ ಮಾಡಲಾಗಿದೆ ಎಂದು ನ್ಯಾಯಮೂರ್ತಿ ಬಿ. ವೀರಪ್ಪ ತಿಳಿಸಿದರು. ಇನ್ನು ರವಿವಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಳಂದ ರಸ್ತೆಯ ರಾಜ್ಯ ಮಹಿಳಾ ನಿಲಯದ ನಾಲ್ಕು ಜನ ಮಹಿಳಾ ನಿವಾಸಿಗಳ ಮದುವೆಯಲ್ಲಿ ಭಾಗಿಯಾಗಿ ನಿವಾಸಿಗಳಿಗೆ ಶುಭ ಕೋರಿದ್ದು, ತುಂಬಾ ಸಂತಸ ತಂದಿದೆ ಎಂದ ಅವರು ಜಿಲ್ಲಾಡಳಿತವೇ ಎದುರು ನಿಂತು ಮದುವೆ ಮಾಡುವ ಈ ಕಾರ್ಯಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಅಪರ ನಿಬಂಧಕರಾದ ಜೆ.ವಿ. ವಿಜಯಾನಂದ, ಗಿರೀಶ ಭಟ್ ಕೆ., ಅರವಿಂದ ಎನ್.ವಿ., ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀನಿವಾಸ ನವಲೆ, ಕಲಬುರಗಿ ಲೋಕಾಯುಕ್ತ ಎಸ್.ಪಿ. ಬಿ.ಕೆ.ಉಮೇಶ ಇದ್ದರು.

# ಡಿ.9 ರಿಂದ 2025 ರ ಮಾ.23 ರವರೆಗೆ ಕಾಲುವೆಗೆ ನೀರು

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಕೃಷ್ಣಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಕಾಲುವೆಗಳಿಗೆ ಹಿಂಗಾರು ಹಂಗಾಮಿಗೆ ಡಿ. 9 ರಿಂದ 2025 ರ ಮಾ.23 ರವರೆಗೆ ನೀರು ಹರಿಸಲಾಗುವುದು ಎಂದು ನೀರಾವರಿ ಸಲಹಾ ಸಮಿತಿಯ ಸಭೆಯ ಅಧ್ಯಕ್ಷ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು. ಶನಿವಾರ ಆಲಮಟ್ಟಿಯ ಕೆಬಿಜೆಎಟಿಲ್ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ಐಸಿಸಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.ಕಳೆದ ವರ್ಷ ಹಿಂಗಾರು ಹಂಗಾಮಿಗೆ ನೀರು ಹರಿಸಿರಲಿಲ್ಲ. ಆದ-'ರೆ ಈ ಬಾರಿ ನೀರಿನ ಲಭ್ಯತೆಯ ಕಾರಣ ರೈತರಿಗೆ ಅನುಕೂಲವಾಗುವ ದೃಷ್ಠಿಯಿಂದ ಹಿಂಗಾರಿಗೆ ನೀರಬಂಧಿ ಪದ್ಧತಿಗೆ ಅನುಗುಣವಾಗಿ ನೀರು ಹರಿಸಲಾಗುತ್ತಿದೆ ಎಂದರು. ಆಲಮಟ್ಟಿ ಜಲಾಶಯದಲ್ಲಿ 104 ಹಾಗೂ ನಾರಾಯಣಪುರದಲ್ಲಿ 11 ಸೇರಿ 115 ಟಿಎಂಸಿ ನೀರು ಜಿವಜಲವಿದೆ. ಇದರಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ 42.25 ಟಿಎಂಸಿ ನೀರು ಹೆಚ್ಚಿಗೆ ಲಭ್ಯವಿದೆ.



ಆಲಮಟ್ಟಿ ಜಲಾಶಯದ ಆಧೀನದ ಹಂತ-1 ಹಂತ2 ಕಾಲುವೆಗಳಿಗೆ ಹಾಗೂ ನಾರಾಯಣಪುರ ಎಡದಂಡೆ ಕಾಲುವೆಗೆ ನ.20 ರವರೆಗೆ ನೀರು ಹರಿಸಲಾ ಗುತ್ತದೆ. ನ.21 ರಿಂದ ಡಿ.8 ರವರೆಗೆ ನೀರು ಹರಿಸುವುದನ್ನು ಈ ಕಾಲುವೆಗೆ ನಿಲ್ಲಿಸಲಾಗುತ್ತದೆ. ಆದ-'ರೆ ನಾರಾಯಣಪುರ ಬಲದಂಡೆ ಕಾಲುವೆಗೆ ಮಾತ್ರ ಅಲ್ಲಿನ ಬೆಳೆಗೆ ಅನುಕೂಲವಾಗಲು ನ.17 ರಿಂದ ನ,24 ರವರೆಗೆ ಕಾಲುವೆ ಬಂದ ಮಾಡಿ. ನ.25 ರಿಂದ ನ.30 ರವರೆಗೆ ನಿರಂತರ ನೀರು ಹರಿಸಲಾಗುತ್ತದೆ. ಮತ್ತೆ ಈ ಕಾಲುವೆಗೆ ಡಿ.1 ರಿಂದ ಡಿ.8 ರವರೆಗೆ ನೀರು ಹರಿಸುವುದನ್ನು ನಿಲ್ಲಸಲಾಗುತ್ತದೆ ಎಂದು ಸಚಿವರು ಹೇಳಿದರು. ಡಿ.1 ರಿಂದ 2025 ರ ಜೂನ್ 30 ರವರೆಗೆ ಕುಡಿಯುವ ನೀರು, ಕೆರೆಗಳ ಭರ್ತಿ, ಕಾಲುವೆಗಳ ಮೂಲಕ ಕುಡಿಯುವ ನೀರಿನ ಯೋಜನೆಗಳಿಗೆ ನೀರು ಪೂರೈಸವುದು, ಭಾಷ್ಪೀಪಕರಣ, ಉಷ್ಣ ವಿದ್ಯುತ್ ಸ್ಥಾವರಗಳಿಗೆ, ಕೈಗಾರಿಕೆಗಳಿಗೆ, ಬ್ಯಾರೇಜ್ ಗಳಲ್ಲಿ ನೀರು ಸಂಗ್ರಹಣೆ, ರೈತರ ಹಿನ್ನೀರಿನ ಬಳಕೆ ಸೇರಿದಂತೆ ಅಂದಾಜು 44 ಟಿಎಂಸಿ ಅಡಿ ನೀರು ಕಾಯ್ದಿರಿಸಲಾಗುತ್ತದೆ. ಕಾಲುವೆಗಳ ಜಾಲದಿಂದ ಪಂಪಸೆಟ್ ಮೂಲಕ ಅಕ್ರಮವಾಗಿ ನೀರು ಎತ್ತಿ ರೈತರು ಜಮೀನಿಗೆ ಒಯ್ಯುತ್ತಿದ್ದು ಗಮನಕ್ಕೆ ಬಂದಿದ್ದು ರೈತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬರುವುದಿಲ್ಲ ಎಂದರು. ಕಾಲುವೆಗಳ ಜಾಲದ ಹೂಳು ತೆಗೆಯುವ ಕ್ಲೋಜರ್ ಕಾಮಗಾರಿಗೆ 135 ಕೋಟಿ ಅನುದಾನ ನೀಡಲಾಗಿದೆ ಎಂದರು.ಆಲಮಟ್ಟಿ ಹಾಗೂ ನಾರಾಯಣಪುರ ಅಚ್ಚುಕಟ್ಟು ಪ್ರದೇಶದಲ್ಲಿ ಬೇಕಾಬಿಟ್ಟಿ ನೀರು ಬಳಕೆ ಹಾಗೂ ಕಬ್ಬು ಬೆಳೆ ಹೆಚ್ಚು ಬೆಳೆದಿದ್ದರಿಂದ ಸವುಳು-ಜವಳಿನ ಪ್ರಮಾಣ ಹೆಚ್ಚಾಗಿದೆ. ಅದರ ನಿಯಂತ್ರಣಕ್ಕಾಗಿರುವ ಕೃಷ್ಣಾ ಕಾಡಾಗೆ ಹೆಚ್ಚಿನ ಅನುದಾನ ನೀಡಲಾಗುವುದು ಎಂದರು. ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕಿಂ ಎ ಅಡಿ ನಾನಾ ಜಿಲ್ಲೆಗಳಿಗೆ ಹಂಚಿಕೆಯಾಗಿರುವ ಕೃಷ್ಣಾ ನದಿಯ ನೀರನ್ನು ಮ್ವರು ಹಂಚಿಕೆ ಮಾಡಬೇಕು ಎಂಬ ರೈತರ ಬೇಡಿಕೆ ಬಗೆಗೆ ಪ್ರಸ್ತಾಪಿಸಿದ ಪತ್ರಕರ್ತರ ಪ್ರಶ್ನೆಗೆ ಶಾಸಕ ಜೆ.ಟಿ. ಪಾಟೀಲ ಧ್ವನಿಗೂಡಿಸಿದರು. ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಸಚಿವ ತಿಮ್ಮಾಪುರ ಭರವಸೆ ನೀಡಿದರು. ಸಚಿವರಾದ ಶಿವಾನಂದ ಪಾಟೀಲ, ಶರಣಬಸಪ್ಪಗೌಡ ದರ್ಶನಾಪುರ, ಶಾಸಕರಾದ ಎಚ್.ವೈ. ಮೇಟಿ, ಸಿ.ಎಸ್. ನಾಡಗೌಡ, ವಿಠ್ಠಲ ಕಟಕದೋಂಡ, ಚೆನ್ನಾರೆಡ್ಡಿ ಪಾಟೀಲ ತುನ್ನೂರ, ಜೆ.ಟಿ.ಪಾಟೀಲ, ಅಶೋಕ ಮನಗೂಳಿ, ರಾಜಾ ವೇಣುಗೋಪಾಲ ನಾಯಕ, ಸಂಸದ ರಮೇಶ ಜಿಗಜಿಣಗಿ, ಕೆಬಿಜೆಎಟಿಲ್ ಎಂಡಿ ಕೆ.ಪಿ.ಮೋಹನರಾಜ್, ಮುಖ್ಯ ಎಂಜಿನಿಯರ್ ಎಚ್.ಎನ್. ಶ್ರೀನಿವಾಸ, ಐಸಿಸಿ ಸದಸ್ಯ ಕಾರ್ಯದರ್ಶಿ ಪ್ರೇಮಸಿಂಗ್, ಆರ್.ಮಂಜುನಾಥ ಮತ್ತಿತರರು ಇದ್ದರು.

## ನ.20ರಿಂದ ಅಂತರ ಮಹಿಳಾ ಮಹಾವಿದ್ಯಾಲಯಗಳ ಅಥ್ಲೇಟಿಕ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕ್ರೀಡಾ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ 18ನೇ ಅಂತರ ಮಹಿಳಾ ಮಹಾವಿದ್ಯಾಲಯಗಳ ಅಥ್ಲೇಟಿಕ್ 2024-2025 ಕ್ರೀಡಾಕೂಟ ಇದೇ ನವೆಂಬರ್ 20 ರಿಂದ 22 ರವರೆಗೆ ಮೂರು ದಿನಗಳ ಕಾಲ ವಿವಿಯ ಕ್ರೀಡಾಂಗಣದಲ್ಲಿ ನಡೆಯಲಿದ್ದು ಈ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 400ಕ್ಕೂ ಹೆಚ್ಚು ಕ್ರೀಡಾಪಟುಗಳು 19 ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಇದೇ ಬುಧವಾರ ಆರಂಭವಾಗಲಿರುವ 18ನೇ ಅಥ್ಲೇಟಿಕ್ ಕ್ರೀಡಾಕೂಟದ ಪೂರ್ವ ತಯಾರಿ ಭರದಿಂದ ಸಾಗಿದ್ದು, ಈ ಕ್ರೀಡಾಕೂಟದಲ್ಲಿ ವಿಜಯಪುರ, ಧಾರವಾಡ, ಬಾಗಲಕೋಟ, ಬೀದರ್, ಹೊಸಪೇಟೆ, ಕಲಬುರಗಿ, ಕೊಪ್ಪಳ, ಮಂಡ್ಯ ಹೀಗೆ ಬೇರೆ-ಬೇರೆ ಜಿಲ್ಲೆಗಳಿಂದ ಆಗಮಿಸುವ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಕಳೆದ ವರ್ಷ 17ನೇ ಅಥ್ಲೇಟಿಕ್ ಕ್ರೀಡಾಕೂಟವನ್ನು ಸಹ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದದ್ಯಾನಿಲಯದಲ್ಲಿಯೇ ಸಂಘಟಿಸಿದ್ದು, ಇದರಲ್ಲಿ ಕ್ರೀಡಾಪಟುಗಳು 2 ಹೊಸ ದಾಖಲೆಗಳನ್ನು ಬರೆದಿದ್ದರು. ಈ ಬಾರಿಯು ಇನ್ನಷ್ಟು ದಾಖಲೆಗಳನ್ನು ಕ್ರೀಡಾಪಟುಗಳು ಮಾಡುವ ಆಶಯವಿದೆ ಎಂದು ಕ್ರೀಡಾ ನಿರ್ದೇಶಕ ಪ್ರೊ.ಸಕ್ಪಾಲ್ ಹೂವಣ್ಣ ತಿಳಿಸಿದ್ದಾರೆ. ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತ ತಂಡಗಳಿಗೆ ನಗದು ಬಹುಮಾನ, ಟ್ರೋಫಿ ಮತ್ತು ಬ್ಲೇಜರ್ ನೀಡಲಾಗುವುದು. ಅದರಂತೆ ಪ್ರಥಮ ಸ್ಥಾನಕ್ಕೆ 25,000/- ರೂ ನಗದು ಹಾಗೂ ದ್ವಿತಿಯ ಸ್ಥಾನಕ್ಕೆ ರೂ.15.000/- ನಗದು ಹಾಗೂ ತೃತೀಯ ಸ್ಥಾನಕ್ಕೆ ರೂ.10,000/- ನಗದು ಹಾಗೂ ಟ್ರೋಫಿ ವಿತ-ರಿಸಲಾಗುತ್ತದೆ ಎಂದು ಅವರು ವಿವರಿಸಿದರು. ಇನ್ನೊಂದು ವಿಶೇಷವೆಂದರೆ ಈ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಈ ಹಿಂದೆ ಇರುವ ದಾಖಲೆಗಳನ್ನು ಮು-ರಿದು ಹೊಸ ದಾಖಲೆ ನಿರ್ಮಿಸಿದವರಿಗೆ 5000 ವಿಶೇಷ ನಗದು ಬಹುಮಾನ ನೀಡಲಾಗುವುದು. ಅಷ್ಟೇ ಅಲ್ಲದೆ ಇಲ್ಲಿ ಗೆದ್ದಂತಹ ಕ್ರೀಡಾಪಟುಗಳನ್ನು ಅಖಿಲ ಭಾರತ ಮಟ್ಟದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ಭಾಗವಹಿಸಲು ಕಳುಹಿಸಲಾಗುತ್ತದೆ. ಈ ಅಖಿಲ ಭಾರತ ಮಟ್ಟದಲ್ಲಿ ಗೆದ್ದವರಿಗೆ ನಮ್ಮ ವಿಶ್ವವಿದ್ಯಾನಿಲಯ ಮತ್ತು ಕ್ರೀಡಾ ನಿರ್ದೇಶನಾಲಯದಿಂದ ನಗದು ಬಹುಮಾನ ಕೂಡಾ ವಿತರಿಸಲಾಗುವುದು. ಹಾಗೂ ಇದೇ ಸಂದರ್ಭದಲ್ಲಿ 2023ರಲ್ಲಿ ಅಖಿಲ ಭಾರತದಲ್ಲಿ ಗೆದ್ದ ಕ್ರೀಡಾಪಟುಗೆ ಈ ಬಾರಿ 10,000 ನಗದು ಮತ್ತು ಬ್ಲೇಜರ್ ನೀಡಿ ಸನ್ಮಾನಿಸಲಾಗುತ್ತದೆ.ಆಟಗಾರರಿಗೆಹಾಗೂತೀರ್ಪುಗಾರ-ರಿಗೆ ಊಟ ಹಾಗೂ ವಸತಿಯ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಂಜೆಯ ವೇಳೆ ಮನರಂಜನೆ ಕಾರ್ಯಕ್ರಮಗಳು ಕೂಡ ಏರ್ಪಡಿಸಲಾಗಿದೆ ಎಂದು ಪ್ರೊ.ಸಕ್ಪಾಲ್ ಅವರು ವಿವ-ರಿಸಿದ್ದಾರೆ. ಉದ್ಘಾಟನೆ: ಇದೇ 20 ರಂದು ಬೆಳಿಗ್ಗೆ 11.30ಕ್ಕೆ ಬೆಂಗಳೂರಿನ ಅಂತರಾಷ್ಟ್ರೀಯ ಕ್ರೀಡಾಪಟು ಬಿಂದು ರಾಣಿ.ಜಿ ಕ್ರೀಡಾಕೂಟ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ನಗರದ ಕೆನರಾ ಬ್ಯಾಂಕ್ ಪ್ರಾದೇಶಿಕ ಕಛೇ-ರಿಯ ಮುಖ್ಯಸ್ಥ ಸಂಜಯ ಸತೀಜಾ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ವಹಿಸಲಿದ್ದು, ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ ಚಂದ್ರಶೇಖರ ಉಪಸ್ಥಿತ-ರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಸಮಾರೋಪ**

**ಇದೇ 22ರಂದು ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ನಗರದ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಖ್ಯಾತ ಉದ್ಯಮಿ ಶರಣಬಸಪ್ಪ ಅರಕೇರಿ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ವಿವಿಯ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ ವಹಿಸಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ ಚಂದ್ರಶೇಖರ ಉಪಸ್ಥಿತರಿರಲಿದ್ದಾರೆ ಎಂದು ಕ್ರೀಡಾ ನಿರ್ದೇಶಕ ಪ್ರೊ.ಸಕ್ಪಾಲ ಹೂವಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಎಸ್.ಬಿ.ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ

# ಶಿಕ್ಷಣದ ಜೊತೆಗೆ ಸಂಸ್ಕಾರ ಅವಶ್ಯ :ಬಸವಲಿಂಗ ಸ್ವಾಮೀಜಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿದ್ಯಾರ್ಥಿಗಳು ಉತ್ಸಾಹದಿಂದ ಕ್ರೀಡೆಗಳಲ್ಲಿ ಭಾಗವಹಿಸಿದರೆ, ಉತ್ತಮ ಜ್ಞಾನ ಹಾಗೂ ಆರೋಗ್ಯ ಹೊಂದಬಹುದು ಎಂದು ಜ್ಞಾನಯೋಗಾಶ್ರಮದ ಪೀಠಾಧಿಪತಿ ಬಸವಲಿಂಗ ಸ್ವಾಮೀಜಿ ಹೇಳಿದರು.

ನಗರದ ಎಸ್.ಬಿ.ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಆಶೀರ್ವಾಚನ ನೀಡಿದರು. ವಿದ್ಯಾರ್ಥಿ ಜೀವನ ಅತ್ಯಂತ ಅಪರೂಪದ ವಯಸ್ಸು. ದೇವರು ಕೆಲವ-ರಿಗೆ ಅಂಗ ವೈಕಲ್ಯದಿಂದ ಕಣ್ಣು, ಕಿವಿ ಕೊಟ್ಟಿರುವುದಿಲ್ಲ ಆದರೆ ನಮಗೆ ಎಲ್ಲವನ್ನು ಕೊಟ್ಟಾಗ ಕ್ರೀಡೆ ಹಾಗೂ ಸಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಕ್ರೀಡೆಯಲ್ಲಿ ಉನ್ನತ ಸಾಧನೆ ಮಾಡಬೇಕು. ಇವತ್ತು ನೀವು ನೆರಳಲ್ಲಿ ಕುಳಿತು ಪಾಠ ಕೇಳುತ್ತಿದ್ದಿರಿ ಆದರೆ ನಿಮ್ಮ ತಂದೆ-ತಾಯಿಗಳು ಬಿಸಿಲಲ್ಲಿ ಕೃಷಿ ಕೆಲಸ ಮಾಡುತ್ತಿದ್ದಾರೆ. ನೀವು ಸಾಧನೆ ಮಾಡಿ ಉನ್ನತ ಹುದ್ದೆ ಅಲಂಕರಿಸಿದಾಗ ಅವರ ಶ್ರಮಕ್ಕೆ ನಿಜವಾದ ಸಾರ್ಥಕತೆ ಬರುತ್ತದೆ ಎಂದರು. ಕ್ರೀಡೆ ಇಲ್ಲದ ಜೀವನ ಕೀಟತಿಂದ ಹಣ್ಣಿನಂತೆ ಅದಕ್ಕೆ ಬೆಲೆ ಇರುವುದಿಲ್ಲ. ಹಾಗಾಗಿ ಸದಾ ಚಟುವಟಿ-ಕೆಯಿಂದ ಇದ್ದರೆ, ನಮ್ಮಲ್ಲಿ ಜ್ಞಾನ ಹಾಗೂ ಶರೀರಿಕ ಬೆಳವಣಿಗೆಗಳುಂಟಾಗುತ್ತವೆ ಹಾಗಾಗಿ ಎಲ್ಲರೂ ಈ ವಯಸ್ಸಿನಲ್ಲಿ ಹೆಚ್ಚು ಕ್ರಿಯಾಶೀಲತೆಯಿಂದ ಎಲ್ಲ ಚಟುವಟಿ-ಕೆಗಳಲ್ಲಿ ಭಾಗವಹಿಸಬೇಕು ಎಂದು ಹೇಳಿದರು. ಜಮಖಂಡಿ ಬಿಎಲ್ ಡಿ ಸಂಸ್ಥೆಯ ಆಡಳಿತ ಅಧಿಕಾರಿ ಪ್ರೊ. ಎಸ್.ಎಚ್.ಲಗಳಿ ಮಾತನಾಡಿ, ಈ ಮಹಾವಿದ್ಯಾಲಯಕ್ಕೆ 8 ದಶಕಗಳನ್ನು ಪೂರೈಸಿದೆ. ಪರಮ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಈ ಕಾಲೇಜಿನ ವಿದ್ಯಾರ್ಥಿ, ನಾನು ಇಲ್ಲಿಯೇ ಕಲಿತು ಇದೆ ಕಾಲೇಜಿನ ಆಡಳಿತ ಅಧಿಕಾ-ರಿಯಾಗಿದ್ದೇನೆ. ಇಲ್ಲಿ ಕಲಿತವರೆಲ್ಲರೂ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ನಾವೆಲ್ಲ ಅದೃಷ್ಟವಂತರು ಎಂದರು. ಬಂಥನಾಳ ಶ್ರೀಗಳು ನಮ್ಮ ಎಸ್.ಬಿ.ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯ 2 ನೇ ಮಹಾಯುದ್ಧದ ವಿಜಯದ ನಂತರ ವಿಜಯಾ ಕಾಲೇಜು ಸ್ಥಾಪನೆ ಮಾಡಿದರು. ನಮ್ಮ ಸಂಸ್ಥೆ ದೇಶದ ನಂ.1 ಇನ್ಫ್ರಾಸ್ಟಕ್ಚರ್ ಹೊಂದಿದೆ. ಸುಮಾರು 1 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ, ಮಕ್ಕಳಿಗೆ ಈಜುಕೊಳ, ಒಳಾಂಗಣ ಕ್ರೀಡಾಂಗಣ ಸೇರಿದಂತೆ ಉನ್ನತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಲ್ಲ ವಿದ್ಯಾರ್ಥಿಗಳು ಅದರ ಸದುಪಯೋಗ ಮಾಡಿಕೊಂಡು ಕ್ರೀಡಾ ಸಾಧಕರಾಗಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿಗಳ ಭವಿಷ್ಯ ರೂಪ ಗೊಳ್ಳಬೇಕಾದರೆ ಶಿಕ್ಷಕರ ಪಾತ್ರ ಬಹಳ ಮಹತ್ವದ್ದು, ಮಕ್ಕಳು ಶಿಕ್ಷಣದೊಂದಿಗೆ ಕ್ರೀಡೆ ಹಾಗೂ ಸಂಸ್ಕೃತಿಕ ಚಟುವಟಿ-ಕೆ ಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಅವರ ಬದುಕನ್ನು ಉಜ್ವಲ ಗೊಳಿಸಬೇಕು ಎಂದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಆರ್.ಎಂ.ಮಿರ್ದೆ, ಉಪ ಪ್ರಾಚಾರ್ಯ ಡಾ.ಅನಿಲ ನಾಯಕ, ಪಿಯುಸಿ ಪ್ರಾಚಾರ್ಯ ಪ್ರೊ.ಸಿ.ಬಿ.ಪಾಟೀಲ, ಐಕ್ಯೂಎಸಿ ಸಂಂ-ಯೋಜಕ ಡಾ.ಪಿ.ಎಸ್. ಪಾಟೀಲ, ನ್ಯಾಕ್ ಸಂಯೋಜಕ ಡಾ.ಮಹೇಶಕುಮಾರ. ಕೆ, ಕ್ರೀಡಾ ವಿಭಾಗದ ನಿರ್ದೇಶಕ ಎಸ್. ಕೆ.ಪಾಟೀಲ, ಸಾಂಸ್ಕೃತಿಕ ವಿಭಾಗದ ಸಂಂ-ಯೋಜಕ ಡಾ. ಶ್ರೀನಿವಾಸ ದೊಡಮನಿ ಮತ್ತಿತರರು ಉಪಸ್ಥಿತರಿದ್ದರು.

## ವೃಕ್ಷೋಥಾನ್ ಹೆರಿಟೇಜ್ ರನ್: ನೋಂದಣಿಗೆ ನ.30 ಕೊನೆ ದಿನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರದಲ್ಲಿ ಡಿಸೆಂಬರ್ 22 ರಂದು ಜರುಗಲಿರುವ ವೃಕ್ಷೋಥಾನ್ ಹೆರಿಟೇಜ್ ರನ್ ಗೆ ನೋಂದಣಿ ಮಾಡಲು ನವೆಂಬರ್ 30 ಕೊನೆಯ ದಿನವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಈ ಕೂಡಲೇ ಓಟದಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ಕೋಟಿ ವೃಕ್ಷ ಅಭಿಯಾನ ಪ್ರತಿಷ್ಠಾನ ಸಂಚಾಲಕ ಡಾ. ಮುರುಗೇಶ ಪಟ್ಟಣಶೆಟ್ಟಿ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಸಸಿಗಳನ್ನು ನೆಟ್ಟು, ಮರಗಳನ್ನು ಬೆಳೆಸಲು ಪ್ರೋತ್ಸಾಹಿಸುವ ವಿಜಯಪುರ ಹಸಿರಿನ ಹಬ್ಬ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತ ಜನ ಜಾಗೃತಿ ಓಟದಲ್ಲಿ 18 ವಯಸ್ಸಿನ ಮೇಲ್ಪಟ್ಟ ಯುವಕ-ರಿಂದ ವೃದ್ಧರಾಧಿಯಾಗಿ ಎಲ್ಲರೂ ನೋಂದಣಿ ಮಾಡಬಹುದಾಗಿದೆ. 5ಕಿ.ಮೀ, 10ಕಿ.ಮೀ, ಮತ್ತು 21ಕಿ.ಮೀ ಓಟದಲ್ಲಿ ಭಾಗವಹಿಸಲು ನೋಂದಣಿ ಮಾಡಬಹುದಾಗಿದೆ.ಈ ಓಟವನ್ನು ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ಸಮರ್ಪಿಸಲಾಗಿದ್ದು, ಓಟದಲ್ಲಿ ಭಾಗವಹಿಸಿದ ಎಲ್ಲರಿಗೂ ಸಿದ್ದೇಶ್ವರ ಸ್ವಾಮೀ-ಜಿಯವರ ಭಾವಚಿತ್ರಯುಳ್ಳ ಕಂಚಿನ ಪದಕ ನೀಡಲಾಗುವುದು. ಹಾಗೂ ಉತ್ತಮ ಗುಟಮಟ್ಟದ ಟಿ-ಶರ್ಟ್, ಓಟದ ಮಾರ್ಗದಲ್ಲಿ ಲಘು ಪಾನಿಯ ವ್ಯವಸ್ಥೆ ಮತ್ತು ಪೌಷ್ಟಿಕ ಉಪಹಾರದ ವ್ಯವಸ್ಥೆ ಇರುತ್ತದೆ. ಈ ಬಾರಿ 15 ಸಾವಿರ ಓಟಗಾರರು ಓಡುವ ನಿರೀಕ್ಷೆ ಇದ್ದು, ಕೊನೆಯ ಅವಕಾಶವನ್ನು ತಪ್ಪಿಸಿಕೊಳ್ಳದೇ ಕೂಡಲೆ https://vrukshathon.co.in/event/ ಲಿಂಕ್ ಮೂಲಕ ನೋಂದಣಿ ಮಾಡಿ. ಹೆಚ್ಚಿನ ಮಾಹಿತಿಗಾಗಿ ಡಾ. ರಾಜು ಯಲಗೊಂಡ-8095190218, ವೀರೇಂದ್ರ ಗುಚ್ಚಟ್ಟಿ- 9886668498 ಸಂಪರ್ಕಿಸಿ.

# ದಾಸ ಸಾಹಿತ್ಯದ ಮೇರು ಶಿಖರ ಕನಕದಾಸರು

■ ಉದಯರಶ್ಮಿ ದಿನಪತ್ರಿಕೆ

**'ವೀಣಾಂತರಂಗ'**



ಆ ಪಾಠಶಾಲೆಯ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಅಬ್ರಾಹ್ಮಣನಾದ ವಿದ್ಯಾರ್ಥಿಯೋರ್ವನ ಮೇಲೆ ಯಾವತ್ತೂ ಅಸಮಾಧಾನ. ಇದನ್ನು ಪರಿಹರಿಸಲು ಜ್ಞಾನಿಯಾದ ಗುರುಗಳು ಎಲ್ಲರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು ಯಾರೂ ಇಲ್ಲದ ಜಾಗದಲ್ಲಿ ತಿಂದು ಬರಲು ಹೇಳಿದರು. ಅಂದು ಸಂಜೆ ಮತ್ತೆ ಎಲ್ಲರೂ ಸೇರಿದಾಗ ಗುರುಗಳು ಹಣ್ಣನ್ನು ಏನು ಮಾಡಿದಿರಿ? ಎಂದು ಕೇಳಿದಾಗ, ಒಬ್ಬೊಬ್ಬರೂ ತಾವು ತಿಂದ ರೀತಿಯನ್ನು ಸವಿಸ್ತಾರವಾಗಿ ಹೇಳಿದರು. ಗುರುಗಳ ನೆಚ್ಚಿನ ಶಿಷ್ಯ ಮಾತ್ರ ಬಾಳೆಹಣ್ಣನ್ನು ಗುರುಗಳಿಗೆ ಮರಳಿಸುತ್ತಾ ಆ ದೇವರು ಸರ್ವಾಂತರ್ಯಾಮಿ ಹಾಗಾಗಿ ಯಾರೂ ನೋಡದ ಸ್ಥಳ ಈ ಜಗದಲ್ಲಿ ಯಾವುದು ಇಲ್ಲ ಎಂದು ಹೇಳಿದರು. ಆ ಶಿಷ್ಯನ ಮಾತನ್ನು ಕೇಳಿದ ಉಳಿದೆಲ್ಲ ಮಕ್ಕಳು ಕಕ್ಕಾವಿಕ್ಕಿಯಾಗಿ ಆತನನ್ನೇ ನೋಡಿದರೆ ಗುರುಗಳು ಹೆಮ್ಮೆಯಿಂದ ತಮ್ಮ ಶಿಷ್ಯನ ತಲೆ ಸವರಿದರು.ಆ ಶಿಷ್ಯನೇ ನಮ್ಮ ವಿಶ್ವ ಬಂಧುವೆನಿಸಿದ, ಕುಲದ ನೆಲೆಯನ್ನೇ ಪ್ರಶ್ನಿಸಿದ ದಾಸ ಸಾಹಿತ್ಯದ ಶ್ರೇಷ್ಠರಾದ ಕನಕದಾಸರು.

ಇನ್ನೊಂದು ಬಾರಿ ಕೂಡ 'ಸ್ವರ್ಗಕ್ಕೆ ಯಾರು ಹೋಗುತ್ತಾರೆ?' ಎಂದು ಗುರುಗಳು ಕೇಳಿದಾಗ ನಾನು ಹೋದರೆ ಹೋದೇನು ಎಂದು ಉತ್ತರಿಸಿದ ಅವರ ನೆಚ್ಚಿನ ಶಿಷ್ಯ. ನಾನು ಎಂದರೆ ಅಹಂ ಎಂದೂ. ನಾನು ಎಂಬ ಅಹಂಕಾರವು ಮನುಷ್ಯನಲ್ಲಿ ಇಲ್ಲದೆ ಹೋದರೆ ಆತ ಸ್ವರ್ಗಕ್ಕೆ ಹೋಗಬಹುದು ಎಂದು ಮಾರ್ಮಿಕವಾಗಿ ಉತ್ತರಿಸಿದರು. ಇದು ಅವರು ಏರಿದ ಆಧ್ಯಾತ್ಮಿಕ ಔನ್ನತ್ಯಕ್ಕೆ ಸಾಕ್ಷಿ.

ಇಂದಿನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ 78 ಗ್ರಾಮಗಳ ಮಾಂಡಲೀಕರಾಗಿದ್ದ ಕುರುಬ ಸಮಾಜದ ಬೀರಪ್ಪನಾಯಕ ಮತ್ತು ಬಚ್ಚಮ್ಮ ದಂಪತಿಗಳಿಗೆ ತಿರುಪತಿಯ ತಿಮ್ಮಪ್ಪನ ಕೃಪಾಶೀರ್ವಾದದಿಂದ ಹುಟ್ಟಿದ ಪುತ್ರ ತಿಮ್ಮಪ್ಪ ನಾಯಕ. ಚಿಕ್ಕಂದಿನಿಂದಲೂ ಚೂಟಿಯಾಗಿದ್ದ ತಿಮ್ಮಪ್ಪ ನಾಯಕ ಕತ್ತಿವರಸೆ, ಕುದುರೆ ಸವಾರಿ ಮುಂತಾದ ಯುದ್ಧ ವಿದ್ಯೆಗಳ ಜೊತೆ ಜೊತೆಗೆ ಶಾಸ್ತ್ರ, ಸಂಗೀತ, ಸಾಹಿತ್ಯ, ಅಧ್ಯಯನಗಳಲ್ಲಿ ಸಾಕಷ್ಟು ಪರಿಣತಿಯನ್ನು ಹೊಂದಿದ್ದರು. ಆದರೆ ಪ್ರಾಪ್ತ ವಯಸ್ಕರಾಗುವ ಹೊತ್ತಿಗೆ ತಂದೆಯನ್ನು ಕಳೆದುಕೊಂಡದ್ದರಿಂದ ತಾಯಿಯ ಆಸರೆಯಲ್ಲಿ ತಂದೆಯ ಡಣ್ಣಾಯಕ ಹುದ್ದೆಯನ್ನು ಯಶಸ್ವಿಯಾಗಿ ನಿಭಾಯಿಸಲಾರಂಭಿಸಿದರು. ಪ್ರಾಪ್ತ ವಯಸ್ಕರಾಗುತ್ತಲೆ ತಾಯಿ ಬಚ್ಚಮ್ಮ ತಿಮ್ಮಪ್ಪ ನಾಯಕರಿಗೆ ವಿವಾಹವನ್ನು ಮಾಡಿದರು.

ಒಂದು ಸಾರಿ ತಿಮ್ಮಪ್ಪ ನಾಯಕರು ಕೆರೆಕಟ್ಟಿಸುವ ಸಲುವಾಗಿ ನೆಲವನ್ನು ಅಗೆಸುತ್ತಿದ್ದಾಗ ಸುಮಾರು ಏಳು ಕೊಪ್ಪ-ರಿಗೆಯಷ್ಟು, ಚಿನ್ನಾಭರಣಗಳು ದೊರೆತವು. ಅದಷ್ಟೂ ಚಿನ್ನವನ್ನು ತನ್ನ ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣವಾಗಿ ವಿನಿಯೋಗಿಸಿದ ತಿಮ್ಮಪ್ಪ ನಾಯಕನನ್ನು ಜನರು ಕನಕರಾಯ, ಕನಕನಾಯಕ ಎಂದು ಕರೆದು ಗೌರವಿಸಿದರು. ಮುಂದೆ ಕೆಲ ತಿಂಗಳುಗಳಲ್ಲಿ ಕನಕ ನಾಯಕರು ತಾಯಿಯನ್ನು ಕಳೆದುಕೊಂಡರು. ಇನ್ನೇನು ತಾಯಿಯ ವಿಯೋಗ ದುಃಖದಿಂದ ಹೊರಬರುವಷ್ಟರಲ್ಲಿಯೇ ಅವರ ಪತ್ನಿಯೂ ಕೂಡ ಮರಣ ಹೊಂದಿದಳು. ಇದೇ ಸಮಯದಲ್ಲಿ ಕನಕ ನಾಯಕರು ವಿಜಯನಗರ ಸಾಮ್ರಾಜ್ಯದ ಒಂದು ಯುದ್ಧದಲ್ಲಿ ಅಪಾರ ಸೈನಿಕರ ಸಾವು ನೋವುಗಳನ್ನು ನೋಡಿ ಜೀವನದಲ್ಲಿ ಜಿಗುಪ್ಸೆ ಹೊಂದಿ ತಮ್ಮ ದಂಡನಾಯಕ ಹುದ್ದೆಯಿಂದ ನಿವೃತ್ತರಾದರು.

ಮುಂದೆ ವ್ಯಾಸರಾಯರ ಶಿಷ್ಯರಾಗಿ ಹರಿ ನಾಮಸ್ಮರಣೆಯನ್ನೇ ಜೀವನದ ಉಸಿರಾಗಿಸಿಕೊಂಡು ಕಾವ್ಯ, ಶಾಸ್ತ್ರ, ಮೀಮಾಂಸೆಗಳ ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅಲ್ಲಿಯೂ ಕೂಡ ಮೇಲ್ಜಾತಿಯ ಜನರಿಂದ ಉಪಟಳದ ಜೊತೆಗೆ ತಾಯಿ ಹೃದಯದ ಗುರುಗಳ ವಾತ್ಸಲ್ಯವನ್ನು, ಪ್ರೀತಿಯನ್ನು ಅನುಭವಿಸಿದರು.

ಜಾತಿ, ಮತ, ಧರ್ಮಗಳ ಹೆಸರಿನಲ್ಲಿ ನಡೆಯುವ ಬೇಧ ಭಾವಗಳನ್ನು ಖಂಡಿಸುತ್ತಾ ಭಕ್ತನ ಭಕ್ತಿಯನ್ನು ಮೀರಿದ್ದು ಯಾವುದೂ ಈ ಜಗದಲ್ಲಿ ಇಲ್ಲ ಎಂಬ ಸತ್ಯವನ್ನು ಜಗಕ್ಕೆ ಸಾರಿದರು. ಅಪಾರ ಪ್ರಮಾಣದ ದಾಸ ಸಾಹಿತ್ಯದ ಸೃಷ್ಟಿಯ ಜೊತೆ ಜೊತೆಗೆ ಮುಂಡಿಗೆಗಳನ್ನು ಕೂಡ ಬರೆದರು. ತಿರುಮಕೂಡಲು, ಮೈಸೂರು, ಬನ್ನೂರು, ಮದನಪಲ್ಲಿ, ಕಾಗಿನೆಲೆ, ಬಾಡ, ಬಂಕಾಪುರ, ವಿಜಯನಗರ, ಹೀಗೆ ವಿಜಯನಗರ ಸಾಮ್ರಾಜ್ಯದಲ್ಲೆಲ್ಲ ಸಂಚ-ರಿಸುತ್ತ ಕಾವ್ಯಗಳನ್ನು ರಚಿಸುತ್ತಾ, ಸಮಾಜದ ಅಂಕು ಡೊಂಕುಗಳನ್ನು ತಿದ್ದುತ್ತಾ ಜನರನ್ನು ಜಾಗೃತ ಗೊಳಿಸಿದರು. ಸೊಂಟದ ಮೇಲೊಂದು ಪಂಜೆ ಹೆಗಲ ಮೇಲೊಂದು ಕರಿ ಕಂಬಳಿ, ಹಣೆಯ ಮೇಲೆ ನಾಮ ಅವರ ವೇಷಭೂಷಣವಾಗಿತ್ತು. ನೀರಿನ ಹಸಿಬೆ ಮತ್ತು ಮರದ ತಣಿಗೆ (ತಟ್ಟೆ) ಅವರ ಆಸ್ತಿಗಳಾಗಿದ್ದವು.

ದಾಸ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ನೀಡಿದ ಅತಿ ದೊಡ್ಡ ಸಾಹಿತ್ಯಿಕ ಕೊಡುಗೆ. ಅಲ್ಲಿಯವರೆಗೂ ಭಕ್ತಿ ಸಾಹಿತ್ಯ ರಚನೆಯೇ ದಾಸ ಸಾಹಿತ್ಯದ ಮೂಲವಾಗಿದ್ದರೆ ಕನಕದಾಸರು ವಿಡಂಬನೆ ಮತ್ತು ವೈಚಾ-ರಿಕತೆಗಳನ್ನು ಒಳಗೊಂಡ ಸಾಹಿತ್ಯವನ್ನು ಸೃಷ್ಟಿಸುತ್ತ ಸಮಾಜದ ವಿಪರೀತ ನಡಾವಳಿಗಳನ್ನು ಪ್ರಶ್ನಿಸುವಂತಹ ವೈಚಾರಿಕ ದಾಸ ಸಾಹಿತ್ಯವನ್ನು ಸೃಷ್ಟಿಸಿದರು.

**"ಕುಲ ಕುಲ ಕುಲ ವೆಂದು ಹೊಡೆದಾಡದಿರಿ ಅಯ್ಯ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ"... ಎಂದು ಜಾತಿ, ಕುಲ ಧರ್ಮಗಳನ್ನು ಪ್ರಶ್ನಿಸಿದರೆ**

**"'ಕಿಲುಬುವ ಬಟ್ಟಲೊಳು ಹುಳಿ ಕಲಸಿ**
**ಉಣಬಹುದೆ"**
**"ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು"**
**"ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"**
**"ಡೊಂಕು ಬಾಲದ ನಾಯಕರೇ ನೀವೇನೂಟವ ಮಾಡುವಿರಿ"**
**"ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತ್ತು"**
**ಹೀಗೆ ಹಲವಾರು ಕಾವ್ಯಗಳನ್ನು ರಚಿಸಿದರು.**
**ರಾಮಧಾನ್ಯ ಚರಿತೆಯಲ್ಲಿ ರಾಗಿಗೆ ರಾಮಧಾನ್ಯದ ಸ್ಥಾನ ನೀಡಿದರು.**
**ಪಂಚ ಮಹಾಕಾವ್ಯಗಳಾದ**
***ರಾಮಧಾನ್ಯಚರಿತ(ಜಾತಿ ಮತ ಧರ್ಮಗಳ ಕುರಿತು), *ಮೋಹನ ತರಂಗಿಣಿ(ದಾಂಪತ್ಯದ ಕುರಿತು)**
***ನಳ ಚರಿತ್ರೆ ,**
***ಹರಿಭಕ್ತಿಸಾರ,**
***ನರಸಿಂಹ ಸ್ತವಗಳನ್ನು ರಚಿಸಿದರು.**
**ಈ ಎಲ್ಲಾ ಸಾಹಿತ್ಯಗಳನ್ನು ಅವರು ಷಟ್ಪದಿ, ಸಾಂಗತ್ಯ ಮೊದಲಾದ ಛಂದೋ ಬಂಧಗಳಿಂದ ರಚಿಸಿದರು.**



ಶ್ರೇಷ್ಠ ಭಕ್ತ, ಚಿಂತಕ, ಸಾಹಿತಿ ಆದ ಕನಕದಾಸರು ಪುರಂದರದಾಸರ ಸಮಕಾಲೀನರು. ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಎಂದೇ ಇವ-ರಿಬ್ಬರು ಹೆಸರಾದವರು. ಇಬ್ಬರೂ ವ್ಯಾಸರಾಯರ ನೆಚ್ಚಿನ ಶಿಷ್ಯರು. ಶ್ರೇಷ್ಠ ಸಂತರು ಕೀರ್ತನಕಾರರು, ಮಹಾ ಮಾನವತಾವಾದಿ ಕನಕದಾಸರು 15 -16ನೇ ಶತಮಾನದ ಮಹಾನ್ ಸಂತರು.

ಮುಂದೆ ತಮ್ಮ ಜೀವಿತದ ಕೊನೆಯ ಕಾಲದಲ್ಲಿ ತಮ್ಮ ಊರಾದ ಬಾಡದಲ್ಲಿ ನೆಲೆಸಿ, ಅಲ್ಲಿಯೇ ತಮ್ಮ ಆರಾಧ್ಯ ದೈವವಾದ ಕಾಗಿನೆಲೆ ಆದಿಕೇಶವನ ದೇಗುಲ ಸ್ಥಾಪಿಸಿ "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು ಪದುಮನಾಭನ ಪಾದದೊಲುಮೆ ಎನಗೆ ದೊರಕಿತು" ಎಂದು ಭಜಿಸುತ್ತಾ ಸುಮಾರು ನೂರು ವರ್ಷಗಳ ಕಾಲ ಜೀವಿಸಿ ಆದಿ ಕೇಶವನಲ್ಲಿ ಮುಕ್ತಿ ಹೊಂದಿದರು.

ಕೆಲವು ವರ್ಷಗಳ ಹಿಂದೆ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಕನಕದಾಸರು ದಾಸ ಸಾಹಿತ್ಯಕ್ಕೆ ನೀಡಿದ ಶ್ರೇಷ್ಠ ಕೊಡುಗೆಯ ಸ್ಮರಣಾರ್ಥ-ವಾಗಿ ಬೃಹದಾಕಾರದ ಕೋಟೆ ಗೋಡೆಯನ್ನು ಮತ್ತು ಸ್ಮಾರಕ ಭವನವನ್ನು ನಿರ್ಮಿಸಲಾಗಿದೆ. ಸ್ಮಾರಕ ಭವನದ ಗೋಡೆಗಳಲ್ಲಿ ಕನಕದಾಸರ ಜೀವನದ ಮುಖ್ಯಘಟ್ಟಗಳನ್ನು ಉಬ್ಬು ಚಿತ್ರಗಳಲ್ಲಿ ರಚಿಸಲಾಗಿದೆ. ಭವನದ ಮುಖ್ಯ ಭಾಗದಲ್ಲಿ ಶಿಲಾ ಫಲಕಗಳಲ್ಲಿ ಅವರ ಸಾಹಿತ್ಯದ ರಚನೆಗಳನ್ನು ಒಡಮೂಡಿಸಲಾಗಿದೆ. ಭವನದ ಕೇಂದ್ರ ಸ್ಥಾನದಲ್ಲಿ ಕನಕದಾಸರ ಬೃಹತ್ ಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಂಥ ಮಹಾನ್ ಚೇತನವನ್ನು ಪಡೆದ ಕನ್ನಡ ನಾಡು ಧನ್ಯ. ಕನಕದಾಸರ ವೈಚಾರಿಕ ಮನೋಭಾವ, ಮಾನವತಾವಾದ, ವಿಶ್ವಬಂಧುತ್ವ ನಮಗೆ ದಾರಿದೀಪವಾಗಲಿ ಎಂಬ ಆಶಯದೊಂದಿಗೆ..

**ಲೇಖನ**
**- ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ-ಗದಗ**



# ಸಮ್ಮೇಳನದ ಯಶಸ್ಸಿಗೆ ತಾಲ್ಲೂಕು ಆಡಳಿತದ ಸಹಕಾರ :ಪ್ರಕಾಶ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗಾಗಿ ಪಟ್ಟಣ ಹಾಗೂ ತಾಲ್ಲೂಕಿನ ಎಲ್ಲ ಕನ್ನಡಾಭಿಮಾನಿಗಳು ಹಾಗೂ ಸಾಹಿತ್ಯಾಸಕ್ತರು ಹಾಗೂ ಪರಿಷತ್ ಕೈಗೊಳ್ಳುವ ಎಲ್ಲ ಕ್ರಮಗಳಿಗೆ ತಾಲ್ಲೂಕು ಆಡಳಿತದ ಸಹಕಾರವಿದೆ ಎಂದು ತಹಶೀಲ್ದಾರ ಪ್ರಕಾಶ ಸಿಂದಗಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇತ್ತೀಚಿಗೆ ಜರುಗಿದ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಸಾಹಿತ್ಯ ಸಮ್ಮೇಳನದ ರೂಪುರೇಷೆಗಳನ್ನು ಪರಿಷತ್ತಿನ ವಿವಿಧ ಸಮಿತಿಗಳು ಸಿದ್ಧಪಡಿಸಲಿ ನಾವು ಅಗತ್ಯ ನೆರವು ನೀಡಲು ಸಿದ್ಧ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಸಮ್ಮೇಳನದ ಪೂರ್ವತಯಾರಿಗಾಗಿ ಇನ್ನೂ ಹಲವು ಸಭೆಗಳು ಜರುಗುತ್ತವೆ. ಸಾಹಿತ್ಯ ಸಮ್ಮೇಳನ ಯಾವುದೇ ಜಾತಿ, ಮತ, ವರ್ಗ, ಸಮುದಾಯಕ್ಕೆ ಸೀಮಿತವಾಗಿಲ್ಲ. ಇದು ಎಲ್ಲ ಕನ್ನಡ ಮನಸ್ಸುಗಳ ಜಾತ್ರೆ. ಆದ್ದರಿಂದ ಮುಂದಿನ ಎಲ್ಲ ಸಭೆಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಿ ತಮ್ಮ ವಿಚಾರ, ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಬೇಕು ಎಂದರು.

ನಿವೃತ್ತ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಕೆ.ಕುದರಿ, ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎಸ್.ಎನ್.ಬಸವರೆಡ್ಡಿ, ತಾಲ್ಲೂಕು ಕಸಾಪ ಅಧ್ಯಕ್ಷ ಜಿ.ಪಿ.ಬಿರಾದಾರ, ಕಾಶೀನಾಥ ತಳಕೇರಿ, ಪ್ರಕಾಶ ಗುಡಿಮನಿ ಸಮ್ಮೇಳನದ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು. ತಾಲ್ಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಸಿದ್ಧು ಮೇಲಿನಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಿಂದಗಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಬಿ.ಯಡ್ರಾಮಿ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಎ.ಎಸ್.ಡೋಣೂರ, ಸಿಂದಗಿ ತಾಲ್ಲೂಕು ಕಸಾಪ ಮಾಜಿಅಧ್ಯಕ್ಷ ಚಂದ್ರಶೇಖರ ದೇವರಡ್ಡಿ, ವಚನ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಜೆ.ಆರ್.ಬಿರಾದಾರ, ಸಂಗಪ್ಪ ತಡವಲ್, ಅಜೀಜ್ ಯಲಗಾರ, ರಾವುತ ತಳಕೇರಿ, ಉಮೇಶ ಪಟ್ಟಣ, ಅರುಣ ಕೋರವಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಳು ಇದ್ದರು.



# ಸಿದ್ದೇಶ್ವರ ಶ್ರೀಗಳ ಆಧ್ಯಾತ್ಮ ಎಲ್ಲರನ್ನು ತಲುಪಲಿ : ಸಿದ್ದಲಿಂಗ ಶ್ರೀ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಸಿದ್ದೇಶ್ವರ ಶ್ರೀಗಳು ತಮ್ಮ ಆದ್ಯಾತ್ಮೀಕ ಪ್ರವಚನಗಳಿಂದ ಭಕ್ತರನ್ನು ಸನ್ಮಾರ್ಗಕ್ಕೆ ಕರೆದುಕೊಂಡು ಹೋಗಿ ಅವರ ಜೀವನವನ್ನು ಪಾವನಗೊಳಿಸುತ್ತಿದ್ದರು ಎಂದು ಬಸವನ ಬಾಗೇವಾಡಿಯ ವಿರಕ್ತ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಚಡಚಣದ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಕಳೆದ ಹದಿನೈದು ದಿನಗಳಿಂದ ನಡೆಯುತ್ತಿರುವ ಅಮೃತಾನಂದ ಶ್ರೀಗಳು ಆದ್ಯಾತ್ಮಿಕ ಪ್ರವಚನದ ಮುಕ್ತಾಯ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿ ಅವರು ಮಾತನಾಡಿದರು.

ಸಿದ್ದೇಶ್ವರ ಶ್ರೀಗಳು ನುಡಿದಂತೆ ನಡೆದ ಮಹಾನ ಸಂತರಾಗಿದ್ದರು. ಎಲ್ಲರನ್ನು ಪ್ರೀತಿಸುವ ಅವರ ಭಾವ ಅವರನ್ನು ನಡೆದಾಡುವ ದೇವರನ್ನಾಗಿಸಿದೆ. ಸಿದ್ದೇಶ್ವರ ಶ್ರೀಗಳು ಚಡಚಣದಲ್ಲಿ ಶಿಕ್ಷಣ ಕಲಿತಿರುವದು ಈ ಭಾಗದ ಭಕ್ತರ ಪುಣ್ಯವೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿ, ಸಿದ್ದೇಶ್ವರ ಶ್ರೀಗಳು ನಮ್ಮ ಭಾಗದ ಬಗ್ಗೆ ಪ್ರೀತಿ ಹೊಂದಿದ್ದರು ಎನ್ನುವದೆ ನಮಗೆ ಭಾಗ್ಯ ಎಂದು ಹೇಳಿದರು. ಪರಿಸರದ ಬಗ್ಗೆ ಕಾಳಜಿ, ಎಲ್ಲರನ್ನು ಪ್ರೀತಿಯಿಂದ ಕಾಣುವದು, ರೈತರ ಬಗ್ಗೆ ಗೌರವ ಹೊಂದುವದನ್ನು ಸಿದ್ದೇಶ್ವರ ಶ್ರೀಗಳು ತಮ್ಮ ಪ್ರವಚನಗಳಲ್ಲಿ ಹೇಳಿ ಸಮಾಜವನ್ನು ತಿದ್ದುವ ಕೆಲಸ ಮಾಡಿದ ಮಹಾನ ಸಂತನಾಗಿದ್ದರು. ಅಮೃತಾನಂದ ಶ್ರೀಗಳು ಇಗ ತಮ್ಮ ಪ್ರವಚನಗಳ ಮೂಲಕ ಸಿದ್ದೇಶ್ವರ ಶ್ರೀಗಳ ಸಮಾಜ ಸುಧಾರಣೆಯ ಕೆಲಸವನ್ನು ಮುಂದು ವರಿಸಿರುವದು ಭಕ್ತರಲ್ಲಿ ಸಂತಸ ತಂದಿದೆ ಎಂದು ಹೇಳಿದರು.

ಕಾಂಗ್ರೆಸ ಮುಖಂಡ ಎಂ ಆರ್ ಪಾಟೀಲ ಮಾತನಾಡಿದರು.

ಬಿಜೆಪಿ ಮುಖಂಡ ಸಂಜೀವ ಐಹೊಳ್ಳಿ ಉಪಸ್ಥಿತ-ರಿದ್ದರು.

ಕಾರ್ಯಕ್ರಮದ ಸಾನಿದ್ಯ ವಹಿಸಿದ್ದ ಕಾತ್ರಾಳ ಗುರುದೇವ ಆಶ್ರಮದ ಅಮೃತಾನಂದ ಸ್ವಾಮೀಜಿ, ಚಡಚಣದ ಗುರುದೇವ ಆಶ್ರಮದ ಯೋಗಾನಂದ ಶ್ರೀಗಳು, ಗೋರ ಚಿಂಚೊಳ್ಳಿಯ ಸಿದ್ದರಾಮೇಶ್ವರ ಪಟ್ಟದೇವರು, ಧಾರವಾಡದ ಡಾ.॥ ಬಸವಾನಂದ ಶ್ರೀಗಳು, ಶಿವಾನಂದ ಶ್ರೀಗಳು ಆಶೀರ್ವಚನ ನೀಡಿದರು.

15 ದಿವಸಗಳವರೆಗೆ ದಾಸೋಹ ಸೇವೆ ನೀಡಿದ ಮುತ್ತಿನ ಬಂಧುಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಚಡಚಣ ಆಧ್ಯಾತ್ಮೀಕ ಪ್ರವಚನ ಸೇವಾ ಸಮೀತಿಯ ಎಲ್ಲ ಪದಾಧಿಕಾರಿಗಳು, ಚಡಚಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಪ್ರಾಚಾರ್ಯ ಮನೋಜ ಕಟಗೇರಿ ಸ್ವಾಗತಿಸಿದರು, ನಿವೃತ್ತ ಪ್ರಾಧ್ಯಾಪಕ ಆರ್.ಪಿ. ಬಗಲಿ ವಂದಿಸಿದರು, ನಿವೃತ್ತ ಪ್ರಾಚಾರ್ಯ ಎಸ್.ಕೆ.ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು.

# ಕನಕದಾಸರ ಸಕಲ ತತ್ವ-ಚಿಂತನೆ ಮನು ಕುಲಕ್ಕೆ ಸಂಜೀವಿನಿ

■ ಉದಯರಶ್ಮಿ ದಿನಪತ್ರಿಕೆ



ಚಿಕ್ಕಪಡಸಲಗಿ: ಕೀರ್ತನೆಗಳ ಹರಿಕಾರ ಭಕ್ತ ಕನಕದಾಸರ ಚರಿತ್ರೆ ಆವಣಿ9ನೀಯವಾಗಿದೆ.ಅವರ ಸಕಲ ಚಿಂತನೆಗಳ ತತ್ವಸಾರಗಳು ಇಡೀ ಮನುಕುಲಕ್ಕೆ ಬೆಳಕಾಗಿವೆ. ಮನು ತತ್ವದ ಒಳಗಣ್ಣು ತೆರೆಸಿವೆ. ಜ್ಞಾನೋದಯದ ರಸವೋನ್ನತಿ ಉಣಬಡಿಸಿದ್ದು, ಅವು ಬದುಕಿನ ಉನ್ಮಾದಕ್ಕೆ ಬೆಳಕಾಗಿವೆ ಎಂದು ಪ್ರಭಾರ ಮುಖ್ಯೋಪಾಧ್ಯಾಯ ಬಸವರಾಜ ಜಾಲೋಜಿ ಅಭಿಪ್ರಾಯಿಸಿದರು.

ಅವರು ಚಿಕ್ಕಪಡಸಲಗಿ ಗ್ರಾಮದಲ್ಲಿ ಗದುಗಿನ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆಯಲ್ಲಿ ಸೋಮವಾರ ದಾಸ ಶ್ರೇಷ್ಟ ಕನಕದಾಸರ ಜಯಂತಿ ಅಂಗವಾಗಿ ಕನಕರ ಹಾಗೂ ಕನ್ನಡ ಕುಲಗುರು ಲಿಂ,ತೋಂಟದ ಡಾ.ಸಿದ್ದಲಿಂಗ ಪೂಜ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸಮಾಜದ ಹಿಂದುಳಿದ ಕುಟುಂಬದಲ್ಲಿ ಜನಿಸಿ ತಮ್ಮ ವೈಚಾರಿಕ ಕೃತಿಗಳ ಮೂಲಕ ಗುರುತಿಸಿಕೊಂಡಿರುವ ಕನಕರು ಶ್ರೇಷ್ಠ ವಿದ್ವಾಂಸರು. ಜಾತಿ,ಮತ, ಕುಲ, ಗೋತ್ರಗಳಿಗೆ ಅಂಟಿಕೊಳ್ಳದೇ ಮನುಕುಲದ ದಿವ್ಯತೆಗೆ ಮಹತ್ವವನ್ನು ನೀಡಿದ್ದಾರೆ.

ತಮ್ಮದೇ ಬುದ್ದಿವಂತಿಕೆ, ಚುರುಕತನದ ಆಲೋಚನಾ ಲಹರಿಯ ಪ್ರಜ್ಞೆಯಿಂದ ಸಾಹಿತ್ಯ, ಕೃತಿಗಳ ಮೂಲಕ ಅನ್ಯೋನ್ಯ ಸಂದೇಶಗಳನ್ನು ಸಮಾಜದ ಒಳಿತಿಗೆ ಕನಕರು ನೀಡಿದ್ದಾರೆ ಎಂದರು.

ಕವಿಯಾಗಿ,ಕೀರ್ತನಗಾರರಾಗಿ, ದಾಸರಾಗಿ ಪ್ರಫುಲ್ ವೈಚಾರಿಕತೆ ಪ್ರಜ್ಞೆಯೊಂದಿಗೆ ಕನ್ನಡ ಭಾಷೆ ಲೀಲಾಜಾಲವಾಗಿ ಬಳಸಿ ಕನ್ನಡ ಭಾಷೆ ಶ್ರೇಷ್ಠತೆ ಶ್ರೀಮಂತಿಕೆ ಕನಕದಾಸರು ಹೆಚ್ಚಿಸಿದ್ದಾರೆ. ಅವರ ಎಲ್ಲ ಕಾವ್ಯಗಳಲ್ಲಿ ಕವಿ ಸಹಜ ಭಾವ ಅನಾವರಣಗೊಂಡಿವೆ. ಕನಕರ ಕಾವ್ಯ ಕೌಶಲ್ಯ ಬೆರಗುಗೊಳಿಸುವಂತಿದೆ. ಅವು ಜನಸಾಮಾನ್ಯರ ಜೀವನಕ್ಕೆ ದಾರಿದೀಪಗಳಾಗಿವೆ. ಕನಕದಾಸರ ಜೀವನ ಕಥಾ ಹಂದರ ಅಮೂಲ್ಯ ಚಿಂತನೆಗಳಿಂದ ಕೂಡಿವೆ.ಎಲ್ಲ ಜೀವಗಳ ಒಳಿತು ಬಯಸುವಂತಿವೆ. ಹೀಗಾಗಿ ಅವರ ಚಿಂತನೆ ಸಕಲ ಮನು ಕುಲಕ್ಕೆ ಪ್ರಸ್ತುತವಾಗಿದೆ ಎಂದು ಬಸವರಾಜ ಜಾಲೋಜಿ ಅಭಿಪ್ರಾಯಿಸಿದರು.

ವಿಶ್ರಾಂತ ಶಿಕ್ಷಕ ಬಸವರಾಜ ಅನಂತಪೂರ, ಸಮಾಜದ ಅಂಕು,ಡೊಂಕುಗಳನ್ನು ತಿದ್ದಿರುವ ದಾಸಶ್ರೇಷ್ಟ ಕನಕದಾಸರ ಸಾಧನೆ,ಬದುಕಿನ ಮೌಲ್ಯ ನಮಗೆಲ್ಲ ಪ್ರೇರಣೆಗಳಾಗಿವೆ.ಮಕ್ಕಳು ಇಂಥ ಸಾಧಕರ ಜೀವನ ಚರಿತ್ರೆಯನ್ನು ಮೆಲುಕು ಹಾಕಿ ತತ್ವಾದರ್ಶಗಳನ್ನ ಅಳವಡಿಸಿಕೊಳ್ಳಬೇಕು ಎಂದರು

ಶಿಕ್ಷಕರಾದ ಈರಪ್ಪ ದೇಸಾಯಿ, ಲೋಹಿತ ಮಿಜಿ9, ಕುಮಾರ ವಾಣಿ, ಜಿ.ಆರ್.ಜಾಧವ, ಶಿಕ್ಷಕಿಯರಾದ ಕವಿತಾ ಅಂಬಿ, ಸಹನಾ ಕಲ್ಯಾಣಿ (ಹತ್ತಳ್ಳಿ), ಪ್ರಮೀಳಾ ತೇಲಸಂಗ ಸೇರಿದಂತೆ ಶಾಲಾ ಮಕ್ಕಳು ಇತರರಿದ್ದರು.

# ಶ್ರದ್ಧಾ ಭಕ್ತಿಯ ಹಾನಗಲ್ ಸದಾಶಿವ ಸ್ವಾಮೀಜಿ 41 ನೇ ಪುಣ್ಯಸ್ಮರಣೆ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಪಟ್ಟಣದ ಬಸವೇಶ್ವರ ದೇವಸ್ಥಾನದ ಅಂತರಾಷ್ಟ್ರೀಯ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿರುವ ಹಾನಗಲ್ ಸದಾಶಿವ ಸ್ವಾಮೀಜಿಯವರ ದೇವಸ್ಥಾನದಲ್ಲಿ ಸೋಮವಾರ ಹಾನಗಲ್ ಸದಾಶಿವ ಸ್ವಾಮೀಜಿಯವರ 41 ನೇ ಪುಣ್ಯಸ್ಮರಣೆಯನ್ನು ಭಕ್ತರು ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.

ಬೆಳಗ್ಗೆ ದೇವಸ್ಥಾನದಲ್ಲಿ ಹಾನಗಲ್ ಸದಾಶಿವ ಸ್ವಾಮೀಜಿಯವರ ಕರ್ತೃ ಗದ್ದುಗೆಗೆ ಹಾಗೂ ಅವರ ಪಾದುಕೆಗಳಿಗೆ ಬಸವೇಶ್ವರ ದೇವಸ್ಥಾನದ ಅರ್ಚಕ ಗೌರಿಶಂಕರ ಚರಂತಿಮಠ ಅವರು ರುದ್ರಾಭಿಷೇಕ, ವಿಶೇಷ ಪೂಜೆ ನೆರವೇರಿಸಿದರು. ಭಕ್ತರು ಕಾಯಿ-ಕರ್ಪೂರ ಅರ್ಪಿಸಿ ಸ್ವಾಮೀಜಿಯವರ ಕರ್ತೃ ಗದ್ದುಗೆ ಹಾಗೂ ಸ್ವಾಮೀಜಿಯವರ ಪಾದುಕೆಗಳ ದರ್ಶನ ಪಡೆದುಕೊಂಡರು.

ಪೂಜೆ ನೆರವೇರಿದ ನಂತರ ಹಾನಗಲ್ ಸದಾಶಿವ ಸ್ವಾಮೀಜಿಯವರ ಹಾಗೂ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಎತ್ತಿನ ಬಂಡಿಯಲ್ಲಿ ಡೊಳ್ಳಿನ ಮೇಳದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಪಟ್ಟಣದಲ್ಲಿ 1983 ರ ನ. 18 ರಂದು ಆರು ತಿಂಗಳಿಂದ ಸ್ಥಳೀಯ ವಿರಕ್ತಮಠದ ಮುರುಘೇಂದ್ರ ಸ್ವಾಮೀಜಿಯವರು ನಡೆಸಿಕೊಂಡು ಬಂದಿದ್ದ ಬಸವ ಪುರಾಣ ಮಂಗಲ ಹಾಗೂ 63 ಪುರಾತನ ಶರಣರ ಮಂಟಪ ಮಹಾಪೂಜೆಗೆ ಹಾನಗಲ್ ಸದಾಶಿವ ಸ್ವಾಮೀಜಿಯವರು ಬಸವ ನೆಲ ಬಸವನಬಾಗೇವಾಡಿಗೆ ಆಗಮಿಸಿದ್ದರು. ಈ ಕಾರ್ಯಕ್ರಮದ ಸಾನಿಧ್ಯ ವಹಿಸಿ ಪೂಜೆ, ಪ್ರಸಾದಕ್ಕೆ ಚಾಲನೆ ನೀಡಿ ಮಾತನಾಡುವ ಸಂದರ್ಭದಲ್ಲಿ ಅವರು ನಿಮಗೆಲ್ಲ ಆನಂದ ನಮಗೆ ಕೈಲಾಸ ಎನ್ನುತ್ತಾ ಇದೇ ಸ್ಥಳದಲ್ಲಿ ಲಿಂಗೈಕ್ಯರಾದರು. ಸ್ವಾಮೀಜಿಯವರು ಲಿಂಗೈಕ್ಯರಾದ ನಂತರ ಅವರ ಶರೀರವನ್ನು ಅಲ್ಲಿನ ಭಕ್ತರು ಹಾನಗಲ್ಗೆ ತೆಗೆದುಕೊಂಡು ಹೋಗಿ ಅಂತಿಮ ಧಾರ್ಮಿಕ ವಿಧಿವಿಧಾನ ನೆರವೇರಿಸಿ ಅಲ್ಲಿಯೇ ಸ್ವಾಮೀಜಿಯವರ ಕರ್ತೃಗದ್ದುಗೆ ನಿರ್ಮಿಸಿದ್ದಾರೆ. ಇಲ್ಲಿನ ಭಕ್ತರು ಸ್ವಾಮೀಜಿಯವರು ಇಲ್ಲಿಯೇ ಅವರು ಲಿಂಗೈಕ್ಯರಾದ ಹಿನ್ನೆಲೆಯಲ್ಲಿ ಅವರ ದೇವಸ್ಥಾನ ಕಟ್ಟಿಸಿ ಪ್ರತಿ ವರ್ಷ ಅವರ ಪುಣ್ಯಸ್ಮರಣೆ ಮಾಡಿಕೊಂಡು ಬರುತ್ತಿದ್ದೇವೆ ಎಂದು ಬಸನಗೌಡ ಪಾಟೀಲ, ಮಲ್ಲು ಇವಣಗಿ ಹೇಳಿದರು.

ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸುಭಾಸ ಗಬ್ಬೂರ, ಮಲ್ಲು ಬಿದರಿ, ಚಂದಪ್ಪ ಹಡಪದ, ಮುರುಗೇಶಿ ನಾಯ್ಕೋಡಿ, ರವಿ ಚಟ್ಟೇರ, ಈರಪ್ಪ ಅಡಗಿಮನಿ, ಅನಿಲ ಅಗರವಾಲ, ಸದು ಮಿಣಜಗಿ, ಶ್ರೀಶೈಲ ಮಿಣಜಗಿ, ಮುತ್ತು ಮಿಣಜಗಿ ಇತರರು ಭಾಗವಹಿಸಿದ್ದರು.

# ತಾಲೂಕಾಡಳಿತದಿಂದ ಭಕ್ತ ಕನಕದಾಸ ಜಯಂತಿ ಆಚರಣೆ

■ ಉದಯರಶ್ಮಿ ದಿನಪತ್ರಿಕೆ



ಬಸವನಬಾಗೇವಾಡಿ: ಪಟ್ಟಣದ ತಹಸೀಲ್ದಾರ ಕಚೇರಿಯ ಸಭಾಂಗಣದಲ್ಲಿ ತಾಲೂಕಾಡಳಿತದಿಂದ ಸೋಮವಾರ ಹಮ್ಮಿಕೊಂಡಿದ್ದ ಭಕ್ತ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಭಕ್ತ ಕನಕದಾಸ ಭಾವಚಿತ್ರಕ್ಕೆ ಗ್ರೇಡ್-2 ತಹಸೀಲ್ದಾರ ಜಿ.ಎಸ್.ನಾಯಕ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಎಇಇ ಜಿ.ವ್ಹಿ.ಕಿರಸೂರ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ ದೇಸಾಯಿ, ಶಿರಸ್ತೇದಾರ ಬಿ.ಆರ್.ಪೋಲೇಶಿ, ಭೂದಾಖಲೆ ಇಲಾಖೆಯ ಕಲಾದಗಿ, ಪುರಸಭೆ ಮುಖ್ಯಾಧಿಕಾರಿ ಅಪ್ರೋಹ್ಮದ ಪಟೇಲ, ಸಮಾಜ ಕಲ್ಯಾಣ ಇಲಾಖೆಯ ದಫ್ತೇದಾರ, ವಿರೇಶ ಗೂಡ್ಲಮನಿ, ಖಜಾನೆ ಇಲಾಖೆಯ ಮನೋಜ ಪಾಟೀಲ, ಶಿಕ್ಷಣ ಇಲಾಖೆಯ ಎಂ.ವ್ಹಿ.ಗಬ್ಬೂರ, ತಹಸೀಲ್ದಾರ ಕಚೇರಿಯ ಸಿಬ್ಬಂದಿಗಳಾದ ಬಸವರಾಜ ದಾನಿ, ಮಂಜು ಹಳ್ಳೂರ,ಆರ್.ವ್ಹಿ.ಘಾಟಗೆ, ನಿರ್ಮಲಾ ಪೂಜಾರಿ, ಅನಿತಾ ಪಾಟೀಲ ಇತರರು ಇದ್ದರು.

**ಭಾಗವಹಿಸದ ಹಾಲುಮತ ಸಮುದಾಯ**

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾ-ರಿಗಳನ್ನು ಹೊರತು ಪಡಿಸಿದರೆ ಹಾಲುಮತ ಸಮಾಜ ಬಾಂಧವರಾಗಲಿ, ಬೇರೆ ಸಮಾಜ ಬಾಂಧವರಾಗಲಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳಾಗಲಿ, ವಿವಿಧ ಮುಖಂಡರಾಗಲಿ ಯಾರೊಬ್ಬರೂ ಭಾಗವಹಿಸಿರಲಿಲ್ಲ. ಹಾಲುಮತ ಸಮಾಜದ ಮುಖಂಡರು ಪಟ್ಟಣದಲ್ಲಿ ಭಕ್ತ ಕನಕದಾಸ ವೃತ್ತ ನಿರ್ಮಾಣ ಕಾಮಗಾರಿ ನೆರವೇರದೇ ಇರುವದರಿಂದಾಗಿ ಈ ಜಯಂತಿ ಕಾರ್ಯಕ್ರಮದಿಂದ ದೂರ ಉಳಿಯುವುದಾಗಿ ಹೇಳಿದ್ದರಿಂದಾಗಿ ಈ ಸಮಾಜದ ಬಾಂಧವರು ಯಾರೂಬ್ಬರೂ ಭಾಗವಹಿಸಿರಲಿಲ್ಲ. ತಾಲೂಕಾಡಳಿತದಿಂದ ಹಮ್ಮಿಕೊಂಡ ಭಕ್ತ ಕನಕದಾಸ ಜಯಂತಿ ಕಾರ್ಯಕ್ರಮ ಕೇವಲ ಅಧಿಕಾರಿಗಳಿಗೆ ಮಾತ್ರ ಸೀಮಿತವಾಗಿ ಜರುಗಿತು. ಕಾರ್ಯಕ್ರಮದಲ್ಲಿ ಕೇವಲ ಪೂಜೆ ಮಾತ್ರ ನೆರವೇರಿಸಲಾಯಿತು.

# ದುಶ್ಚಟಗಳನ್ನು ತ್ಯಜಿಸಿ ಸಮಾಜಕ್ಕೆ ನೆರವಾಗಿ : ಪ್ರಭುಶ್ರೀ

■ ಉದಯರಶ್ಮಿ ದಿನಪತ್ರಿಕೆ




ಚಿಮ್ಮಡ: ದುಡಿದದ್ದೆಲ್ಲವನ್ನು ದುಶ್ಚಟಗಳಿಗೆ ಖರ್ಚುಮಾಡುವ ಬದಲು ಜೀವನ ನಿರ್ವಹಣೆಯ ಜೊತೆಗೆ ದೇವಸ್ಥಾನಗಳಿಗೆ ಹಾಗೂ ಸಮಾಜಮುಖಿ ಕಾರ್ಯಗಳಿಗೆ ಸ್ವಲ್ಪ ಹಣ ವಿನಿಯೋಗಿಸುವ ಮೂಲಕ ಸಾರ್ಥಕತೆ ಮೆರೆಯಬೇಕೆಂದು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಬನಶಂಕರಿದೇವಿ ಕಲ್ಯಾಣಮಂಟಪದಲ್ಲಿ ಶನಿವಾರ ಶ್ರೀ ಬನಶಂಕರಿದೇವಿ ಸೇವಾ ಸಮೀತಿಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾಣಿಕೆ ಡಬ್ಬಿ ವಿತರಣೆ ಹಾಗೂ ಸಾಧಕರ ಸನ್ಮಾನ ಸಮಾರಂಭದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಕಷ್ಟಕಾಲದಲ್ಲಿ ಕೈ ಹಿಡಿಯುವುದು ನಾವು ಮಾಡಿದ ಪುಣ್ಯ ಕಾರ್ಯಗಳಾದ ದಾನ, ಧರ್ಮಗಳು. ಇಂದು ಸಾರಾಯಿ, ಗುಟಖಾ, ಮುಂತಾದ ದುಶ್ಚಟಗಳಿಗಳಿಗೆ ದಾಸರಾಗಿ ಶಾಂತಿ ನೆಮ್ಮದಿ ಕಳೆದುಕೊಳ್ಳುತ್ತಿದ್ದೇವೆ, ಅದರ ಬದಲಾಗಿ ಆ ಹಣವನ್ನು ದೇವಸ್ಥಾನ, ಇಲ್ಲವೇ ಸಮಾಜಮುಖಿ ಕಾರ್ಯಗಳಿಗೆ ಮೀಸಲಿಟ್ಟು ಆರೋಗ್ಯಕರ ಜೀವನ ನಡೆಸಬೇಕು. ಸಮೀತಿಯವರು ಮನೆ, ಮನೆಗೆ ಕಾಣಿಕೆ ಡಬ್ಬಿ ವಿತರಿಸುವ ಮೂಲಕ ಪುಣ್ಯಕಾರ್ಯಕ್ಕೆ ಸುಲಭ ವಿಧಾನ ನೀಡಿದ್ದು ಪ್ರತಿಯೊಬ್ಬರು ಸತ್ಕಾರ್ಯದಲ್ಲಿ ಭಾಗಿಯಾಗಬೇಕೆಂದರು.

ಹಟಗಾರ ಸಮಾಜದ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ರಾಜು ಭದ್ರಣ್ಣವರ ಮಾತನಾಡಿ ಈ ಭಾಗದಲ್ಲಿ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳು ಹಟಗಾರ ಸಮಾಜದಿಂದ ನಡೆಯುತಿದ್ದು ಯಾವುದೇ ಸಮಾಜದ ಕಾರ್ಯಗಳಿಗೆ ಯಾವುದೇ ಸೇವೆಯ ಅಗತ್ಯವಿದ್ದರೂ ಸ್ಪಂದಿಸಲು ಸಿದ್ದವೆಂದರು. ಸಂಸ್ಥೆಯ ಪ್ರಮುಖರಾದ ಅಶೋಕ ಧಡೂತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ಹಟಗಾರ ಸಮಾಜದ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಮಾಲಾ ಬಾವಲತ್ತಿ, ಪ್ರವೀಣ ಮೈತ್ರಿ, ಗುರಲಿಂಗಪ್ಪಾ ಪೂಜಾರಿ, ಸೇರಿದಂತೆ ಹಲವು ಪ್ರಮುಖರು ಮಾತನಾಡಿದರು. ಸಮಾರಂಭದ ಸಾನಿಧ್ಯವನ್ನಿ ಶ್ರೀ ಜನಾರ್ಧನ ಮಹಾರಾಜರು ವಹಿಸಿದ್ದರು. ಅಧ್ಯಕ್ಷತೆಯನ್ನು ಸೇವಾ ಸಮೀತಿಯ ಅಧ್ಯಕ್ಷ ಚಂದ್ರಕಾಂತ ಜಾಡಗೌಡರ ವಹಿಸಿದ್ದರು.

ಪ್ರಮುಖರಾದ ರಾಮಣ್ಣ ಮುಗಳಖೋಡ, ಅಣ್ಣಪ್ಪಗೌಡ ಪಾಟೀಲ, ಗ್ರಾ.ಪಂ. ಉಪಾಧ್ಯಕ್ಷೆ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿ,

ಪ್ರಗತಿಪರ ರೈತ ಪ್ರಶಸ್ತಿ ಪುರಸ್ಕೃತ ನಿಂಗಣ್ಣ ಪೂಜಾರಿ, ರ.ಬ. ತಾಲೂಕು ನೇಕಾರರ ಒಕ್ಕೂಟದ ಅಧ್ಯಕ್ಷೆ ಹೇಮಾ ಪಟ್ಟಣ, ಸೇರಿದಂತೆ ಹಲವು ಸಾಧಕರನ್ನು ಸತ್ಕರಿಸಿ ಗೌರವಿಸಲಾಯಿತು, ಹಾಗೂ ಸಾಂಕೇತಿಕವಾಗಿ ಹಲವರಿಗೆ ಕಾಣಿಕೆ ಡಬ್ಬಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ನಿವೃತ ಮುಖ್ಯೋಪಾಧ್ಯಾಯ ಶಿಕ್ಷಕ ಮಂಜು ಧಡೂತಿ ಸ್ವಾಗತಿಸಿದರು, ಕೆ.ಎಂ. ಬಿಜಾಪೂರ ನಿರೂಪಿಸಿದರು. ಶ್ರೀಮತಿ ಶಾಖಾಂಬರಿ ಕರಡಿ ವಂದಿಸಿದರು.

# ಬಾವಿಯೊಳಗೆ ಮಹಿಳೆ ಮತ್ತು ಮಗುವಿನ ಶವ ಪತ್ತೆ



■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ತೇಲುವ ಸ್ಥಿತಿಯಲ್ಲಿ ಮಹಿಳೆ ಮತ್ತು ಹೆಣ್ಣು ಮಗುವಿನ ಶವಗಳು ಬಾವಿಯೊಳಗೆ ಪತ್ತೆಯಾದ ಘಟನೆ ತಾಲೂಕಿನ ಹಂಡರಗಲ್ಲ ಗ್ರಾಮದಲ್ಲಿ ಸೋಮವಾರ ವರದಿಯಾಗಿದೆ.

ಮೃತ ದುರ್ದೈವಿಗಳನ್ನು ರಿಯಾನಾ ಇನಾಮದಾರ(25) ಮತ್ತು ಅಮೀರಾ ಇನಾಮದಾರ(5) ಎಂದು ಗುರುತಿಸಲಾಗಿದೆ. ಮೃತರು ತಾಯಿ ಮತ್ತು ಮಗಳು ಎನ್ನಲಾಗುತ್ತಿದೆ. ಕಳೆದ 2 ವರ್ಷಗಳಿಂದ ಪತಿಯನ್ನು ಬಿಟ್ಟು ತವರು ಮನೆಗೆ ಬಂದಿದ್ದ ರಿಯಾನಾ ಮಾನಸಿಕವಾಗಿ ನೊಂದಿದ್ದಳು ಎಂದು ಕೇಳಿಬಂದಿದೆ.

ಘಟನೆಯ ಹಿನ್ನೆಲೆ ಸಂಶಯಾಸ್ಪದವಾಗಿದ್ದು ಸತ್ಯಾ ಸತ್ಯತೆ ಪೊಲೀಸ್ ತನಿಖೆಯಿಂದ ಹೊರಬರಬೇಕಿದೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR